# ಯುಗರಶ್ಮಿ

ಇಸ್ಲಾಮ್ ಮತ್ತು ಮನುಷ್ಯ ಸಮತ್ವ

ಸೌಹಾರ್ದದ ಕರೆ

ಇಸ್ಲಾಂ ಪುರೋಗಮನ ಮತ

ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ

ಜುಲಾಯಿ–ಸಪ್ಟೆಂಬರ್

1975

ವಫಾ–ತಬೂಕ್ 1354

ಬೆಲೆ: ರೂ. 1–00

"ಪರಮಾತ್ಮನ ಅನುಗ್ರಹಗಳನ್ನೂ ಪಾರಿತೋಷಕಗಳನ್ನೂ ನೀವು ಎಣಿಸಿ ಲೆಕ್ಕ ಮಾಡಲು ಪ್ರಯತ್ನಿಸುವಿರಾದರೆ ನಿಮಗೆ ಒಮ್ಮೆಯೂ ಅವುಗಳ ಲೆಕ್ಕ ತೆಗೆಯಲು ಸಾಧ್ಯವಾಗಲಿಕ್ಕಿಲ್ಲ."

—ಪವಿತ್ರ ಖುರ್‌ಆನ್.

# ಯುಗರಶ್ಮಿ


ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು-575001.

ಸಂಪುಟ: 1 ಸಂಚಿಕೆ: 2

ಜುಲಾಯಿ—ಸಪ್ಟಂಬರ್ 1975 / ವಫಾ—ತಬೂಕ್ 1354

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ. ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು.


ವಿಷಯ ಸೂಚಿಕೆ:


ಇಸ್ಲಾಮ್ ಮತ್ತು ಮನುಷ್ಯ ಸಮತ್ವ

ಹಝ್ರತ್ ಅಹ್ಮದರ ಉಪದೇಶಗಳು

ಮುಹಮ್ಮದ್ ಪೈಗಂಬರರ ನುಡಿ ಮುತ್ತುಗಳು

ಸೌಹಾರ್ದದ ಕರೆ

ಇಸ್ಲಾಂ ಪುರೋಗಮನ ಮತ

ಪದ್ಯ

ಅಹ್ಮದಿಯಾ ವಾರ್ತೆಗಳು

ಪುಸ್ತಕ ವಿಭಾಗ—ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 1 | ಜುಲಾಯಿ 1975 / ವಫಾ 1354 | ಸಂಚಿಕೆ: 2

## ಇಸ್ಲಾಮ್ ಮತ್ತು ಮನುಷ್ಯ ಸಮತ್ವ

ಇಸ್ಲಾಮ್ ಮನುಷ್ಯರ ಮಧ್ಯೆ ವರ್ಗಭೇದವನ್ನು ಸಮ್ಮತಿಸುವುದೇ ಇಲ್ಲ. ಇಸ್ಲಾಮಿನ ಉಪದೇಶಗಳ ಪ್ರಕಾರ ಮನುಷ್ಯರು ಅವರು ಯಾವುದೇ ಜಾತಿ, ಜನಾಂಗ, ವಂಶ, ಮತ ಅಥವಾ ರಾಜ್ಯದವರಾಗಿರಲಿ ಮನುಷ್ಯರೆಂಬ ನೆಲೆಯಲ್ಲಿ ಎಲ್ಲರೂ ಸಮಾನರು. ಇಸ್ಲಾಮ್ ಈ ಉಪದೇಶವನ್ನು ಜನರ ಹೃದಯಗಳಲ್ಲಿ ದೃಢಪಡಿಸಲಿಕ್ಕಾಗಿ ಒಂದು ಕ್ರಿಯಾತ್ಮಕ ಏರ್ಪಾಡನ್ನು ಮಾಡಿರುತ್ತದೆ. ಇದು ಪ್ರಾರ್ಥನೆಯಾಗಿದೆ. ಪ್ರಾರ್ಥನೆ ಮಸೀದಿಯಲ್ಲಿ ದಿನಂಪ್ರತಿ ಐದು ಸರ್ತಿ ಒಟ್ಟಿಗೆ ಸೇರಿ ಮಾಡಲಾಗುತ್ತದೆ. ದೇವರ ಪ್ರಾರ್ಥನೆಗಾಗಿ ಒಟ್ಟಿಗೆ ಸೇರುವಾಗ ಎಲ್ಲರೂ ಯಾವುದೇ ವರ್ಗಭೇದದ ಭಾವನೆ ಇಲ್ಲದೆ ಭುಜಕ್ಕೆ ಭುಜ ತಗಲಿಸಿ ನಿಲ್ಲುತ್ತಾರೆ. ಅಲ್ಲಿ ಯಾವನೇ ಅಧಿಕಾರಿಯಾಗಿರಲಿ ಅಥವಾ ಕೆಳಗಿನ ತರಗತಿಯ ನೌಕರನಾಗಿರಲಿ, ಬಿಳಿಯವನಾಗಿರಲಿ ಯಾ ಕರಿಯವನಾಗಿರಲಿ ರಾಜನಾಗಿರಲಿ ಯಾ ಪ್ರಜೆಯಾಗಿರಲಿ ಯಾವುದೇ ವ್ಯತ್ಯಾಸ ಸಮ್ಮತಿಸಲ್ಪಡುವುದಿಲ್ಲ. ಈ ರೀತಿ ದೇವರು ಮಾನವರೆಲ್ಲರೂ ತನ್ನ ದಾಸರೆಂದೂ ಎಲ್ಲರೂ ಸಮಾನರೆಂದೂ ತೋರಿಸಿಕೊಟ್ಟಿರುವನು.

ಇದೇ ಸಂಗತಿಯನ್ನು ಮುಹಮ್ಮದ್ ಪೈಗಂಬರರು ಈ ರೀತಿ ಹೇಳಿರುವರು: ಜನರೇ, ದೇವರು ನಿಮ್ಮ ರೂಪವನ್ನೂ ವರ್ಣವನ್ನೂ ನಿಮ್ಮ ಶರೀರವನ್ನೂ ನೋಡುವುದಿಲ್ಲ. ದೇವರು ನಿಮ್ಮ ಹೃದಯಗಳನ್ನು ನೋಡುತ್ತಾನೆ.'' ಇದು ಎಷ್ಟು ಪ್ರಿಯ ವಚನವಾಗಿದೆ! ಪ್ರತಿಯೊಂದು ಹೃದಯಕ್ಕೆ ಸಮಾಧಾನ ಕೊಡುವ ಮಾತಾಗಿದೆ. ಇಂದಿನ ನಾಗರಿಕ ಲೋಕ ಕೇವಲ ಬಣ್ಣ, ರೂಪ ಮತ್ತು ಜಾತಿಯ ಕಾರಣದಿಂದ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಗಿಂತ ಉತ್ತಮನೆಂದು ತಿಳಿಯುತ್ತದೆ. ಆದರೆ ಇಸ್ಲಾಮ್ ಹೃದಯದ ಸೌಂದರ್ಯವನ್ನು ಯಥಾರ್ಥ ಸೌಂದರ್ಯವೆಂದು ಪರಿಗಣಿಸುತ್ತದೆ. ಒಬ್ಬನು ದೊಡ್ಡವನಾಗಲು ಇಚ್ಛಿಸುವವನಾದರೆ ತನ್ನ ಹೃದಯವನ್ನು ದೊಡ್ಡದನ್ನಾಗಿ ಮಾಡಲಿ, ತನ್ನ ಹೃದಯ ವನ್ನು ಸುಂದರವನ್ನಾಗಿ ಮಾಡಲಿ. ಯಾರ ಹೃದಯ ಸೃಷ್ಟಿಗಳ ಬಗ್ಗೆ ಅನುಕಂಪ ತೋರಿಸುವುದೋ ಯಾರ ಹೃದಯದಲ್ಲಿ ಮಾನವರ ಸೇವೆ ಮಾಡುವ ಉತ್ಸಾಹವಿದೆಯೋ ಆತ ಇತರರಿಗಿಂತ ದೊಡ್ಡವನು.

ಪವಿತ್ರ ಖುರ್‌–ಆನಿನಲ್ಲಿ ದೇವರು ಹೇಳಿರುವುದನ್ನು ನೋಡಿರಿ: "ನಿಮ್ಮದು ಒಂದೇ ಜಾತಿ. ನಿಮ್ಮನ್ನು ಸ್ತ್ರೀ ಪುರುಷರಿಂದ ಸೃಷ್ಟಿಸಿದೆನು. ನೀವು ಕಾಣುವ ವಿವಿಧ ರೂಪಗಳು ನಿಮ್ಮನ್ನು ಗುರುತಿಸಲಿಕ್ಕಾಗಿದೆ. ನನ್ನ ಬಳಿ ಎಲ್ಲರಿಗಿಂತ ಮರ್ಯಾದಸ್ತ ಸತ್ಕರ್ಮವನ್ನು ಕೈಗೊಳ್ಳು ವವನಾಗಿದ್ದಾನೆ.''

ಒಬ್ಬ ಮುಸ್ಲಿಮನ ದೃಷ್ಟಿಯಲ್ಲಿ ಮುಹಮ್ಮದ್ ಪೈಗಂಬರರಿಗೆ ಮನುಷ್ಯರಲ್ಲಿ ಅತ್ಯು ತ್ತಮ ಸ್ಥಾನವಿದೆ. ಅವರು ದೇವರ ಪ್ರೀತಿಗೆ ಪಾತ್ರರಾದ ಪ್ರವಾದಿಯಾಗಿದ್ದಾರೆ. ದೇವರು ಸಹ ಪವಿತ್ರ ಖುರ್‌–ಆನಿನಲ್ಲಿ ಮುಹಮ್ಮದ್ ಪೈಗಂಬರರ ಆಧ್ಯಾತ್ಮಿಕ ಶ್ರೇಷ್ಠತೆಯ ಕುರಿತು ಹಲವೆಡೆಗಳಲ್ಲಿ ವಿವರಿಸಿರುವನು. ಆದರೆ ಇದೇ ಖುರ್‌–ಆನಿನಲ್ಲಿ ಒಂದೆಡೆ ದೇವರು ಈ ರೀತಿ ಮುಹಮ್ಮದ್ ಪೈಗಂಬ ರರಿಗೆ ಆಜ್ಞಾಪಿಸಿರುವನು: "ಎಲೈ ಮುಹಮ್ಮದ್, ನೀನು ಜನರಲ್ಲಿ ಈ ಮಾತಿನ ಪ್ರಚಾರ ಮಾಡು:— ನಾನು ಸಹ ನಿಮ್ಮಂತೆಯೇ ಒಬ್ಬ ಮನುಷ್ಯನಾಗಿರುವೆನು. ನಿಮ್ಮಲ್ಲಿಯೂ ನನ್ನಲ್ಲಿಯೂ ಮನುಷ್ಯ ನೆಂಬ ನೆಲೆಯಲ್ಲಿ ವ್ಯತ್ಯಾಸವಿಲ್ಲ. ನಿಮ್ಮಲ್ಲಿ ಮತ್ತು ನನ್ನಲ್ಲಿ ಇರುವ ವ್ಯತ್ಯಾಸವೇನೆಂದರೆ ದೇವರು ನನ್ನೊಡನೆ ಮಾತಾಡುತ್ತಾನೆ ಎಂದು ಮಾತ್ರವಾಗಿದೆ.'' ನೋಡಿರಿ, ಒಬ್ಬ ಮುಸ್ಲಿಮನ ದೃಷ್ಟಿಯಲ್ಲಿ ಆಧ್ಯಾತ್ಮಿಕವಾಗಿ ಮಹತ್ತಾದ ಸ್ಥಾನವನ್ನು ಪಡೆದವರು ಮುಹಮ್ಮದ್ ಪೈಗಂಬರರಾಗಿರುವರು. ಇಂತಹ ಮುಹಮ್ಮದ್ ಪೈಗಂಬರರ ವಿಷಯವಾಗಿ ಪರಮಾತ್ಮನು ಹೇಳುವುದೇನೆಂದರೆ ಮನುಷ್ಯನೆಂಬ ನೆಲೆಯಲ್ಲಿ ಮುಹಮ್ಮದ್ ಪೈಗಂಬರರು ಬೇರೆ ಯಾವನೇ ಮನುಷ್ಯನಿಗೆ ಸಮಾನರೆಂದು! ಈ ರೀತಿ ಇಸ್ಲಾಮ್ ಪ್ರಪಂಚದ ಎಲ್ಲಾ ಮನುಷ್ಯರ ಗೌರವವನ್ನು ಕಾಪಾಡಿದೆ. ಹೀಗೆ ಪ್ರಪಂಚದ ಯಾವನೇ ಮನುಷ್ಯನಿಗೆ ತಾನು ಬೇರೊಬ್ಬನಿಗಿಂತ ಮನುಷ್ಯನೆಂಬ ನೆಲೆಯಲ್ಲಿ ಉತ್ತಮನೆಂದು ಹೇಳಲು ಹಕ್ಕಿರುವು ದಿಲ್ಲವೆಂದು ಇಸ್ಲಾಮ್ ಕಲಿಸುತ್ತದೆ.

ಮಾನವೀಯ ಸಮಾನತೆಯನ್ನು ಭದ್ರಪಡಿಸಲಿಕ್ಕಾಗಿ ಮುಹಮ್ಮದ್ ಪೈಗಂಬರರು ಒಮ್ಮೆ ಹೀಗೆ ಹೇಳಿರುವರು:— "ಪ್ರಪಂಚದ ಎಲ್ಲಾ ಜನರು ದೇವರ ಕುಟುಂಬದ ಸದಸ್ಯರು. ದೇವರಿಗೆ ತನ್ನ ಕುಟುಂಬದ ಸದಸ್ಯರ ಪೈಕಿ ಯಾರೊಬ್ಬನು ಬೇರೆಯವರನ್ನು ಪ್ರೀತಿಸುತ್ತಾನೋ ಅವನು ಹೆಚ್ಚು ಪ್ರಿಯನು.'' ಇದರಿಂದ ತಿಳಿಯುವುದೇನೆಂದರೆ ಯಾವ ರೀತಿ ದೇವರಿಗೆ ಕರಿಯರೊಡನೆ ಸ್ನೇಹವಿದೆಯೋ ಅದೇ ರೀತಿ ಬಿಳಿಯರೊಡನೆಯೂ ಸ್ನೇಹವಿದೆ. ಯಾವ ರೀತಿ

ಬ್ರಾಹ್ಮಣರೊಡನೆ ಸ್ನೇಹವಿದೆಯೋ ಅದೇರೀತಿ ಹರಿಜನರೊಡನೆಯೂ ಸ್ನೇಹವಿದೆ. ಯಾವರೀತಿ ದೇವರಿಗೆ ಯುರೋಪಿಯನ್ನರೊಡನೆ ಪ್ರೇಮವಿದೆಯೋ ಅದೇರೀತಿ ಆಫ್ರಿಕನರೊಡನೆಯೂ ಪ್ರೇಮವಿದೆ. ಯಾವರೀತಿ ಮುಸಲ್ಮಾನರೊಡನೆ ಸ್ನೇಹವಿದೆಯೋ ಅದೇ ರೀತಿ ಹಿಂದುಗಳೊಡನೆಯೂ ಸ್ನೇಹವಿದೆ. ಏಕೆಂದರೆ ಎಲ್ಲರೂ ದೇವರ ಕುಟುಂಬದ ಸದಸ್ಯರು. ಇಸ್ಲಾಮಿನ ಈ ಉತ್ತಮ ಉಪದೇಶವನ್ನು ಸ್ವೀಕರಿಸಿದವನಿಗೆ ಇತರರನ್ನು ತನಗಿಂತ ಕಮ್ಮಿಯವನೆಂದೂ ನೀಚನೆಂದೂ ಭಾವಿಸಲು ಸಾಧ್ಯವಿಲ್ಲ.

ಮುಹಮ್ಮದ್ ಪೈಗಂಬರರು ತನ್ನ ಮರಣ ಸಮೀಪವಾದಾಗ ಮಕ್ಕಾದಲ್ಲಿ ಬಹಳ ಹೆಚ್ಚು ಮುಸಲ್ಮಾನರು ಒಂದುಗೂಡುವ ಹಜ್ ಸಂದರ್ಭದಲ್ಲಿ ಭಾಷಣಮಾಡುತ್ತಾ ಹೇಳಿದರು: "ಜನರೇ ಕೇಳಿರಿ; ನಿಮ್ಮಲ್ಲಿ ಯಾವನೇ ಕರಿಯನಿಗೆ ಬಿಳಿಯನಿಗಿಂತ ಶ್ರೇಷ್ಠತೆಯಿಲ್ಲ. ಅದೇರೀತಿ ಬಿಳಿಯನಿಗೆ ಕರಿಯನಿಗಿಂತ ಶ್ರೇಷ್ಠತೆಯಿಲ್ಲ. ಅರಬಿಗೆ ಅರಬಿಯಲ್ಲದವನಿಗಿಂತ ಯಾ ಅರಬಿಯಲ್ಲದವನಿಗೆ ಅರಬಿಯವನಿಗಿಂತ ಯಾವುದೇ ಶ್ರೇಷ್ಠತೆಯಿಲ್ಲ. ಸದಾಚಾರಗಳಲ್ಲಿ ಮಾತ್ರ ಒಬ್ಬ ಇನ್ನೊಬ್ಬನಿಗಿಂತ ಮುಂದುವರಿಯಲು ಸಾಧ್ಯ.''

ಮಾನವೀಯ ಸಮಾನತೆಯನ್ನು ಸ್ಥಾಪಿಸಲು ಇಸ್ಲಾಮ್ ನೀಡಿದ ಉಪದೇಶಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಮುಹಮ್ಮದ್ ಪೈಗಂಬರರು ಪ್ರಪಂಚಕ್ಕೆ ಬಂದಾಗ ಮನುಷ್ಯ ಸಮತ್ವ ನೆಲೆಗೊಂಡಿರಲಿಲ್ಲ. ಗುಲಾಮಗಿರಿ ಜಾರಿಯಲ್ಲಿತ್ತು. ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನನ್ನು ಕೆಲವು ನಾಣ್ಯಗಳಿಗೆ ಪ್ರತಿಫಲವಾಗಿ ಮೃಗಗಳನ್ನು ಮತ್ತು ಇತರ ವಸ್ತುಗಳನ್ನು ಮಾರಾಟಮಾಡುವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದನು. ಈ ಗುಲಾಮರಿಗೆ ಬಹಳ ಹಿಂಸೆಕೊಡುತ್ತಿದ್ದರು. ಮುಹಮ್ಮದ್ ಪೈಗಂಬರರು ಜನಿಸಿದ ಮಕ್ಕಾದಲ್ಲಿ ಸಹ ಬಹಳ ಗುಲಾಮರು ಇದ್ದರು. ಈ ಗುಲಾಮರಿಗೆ ಯಾವುದೇ ಸ್ವಾತಂತ್ರ್ಯವಿರಲಿಲ್ಲ. ಇಸ್ಲಾಮ್ ಬಂದು ಈ ಕೊಳಕು ಸಂಪ್ರದಾಯವನ್ನು ಲೋಕದಿಂದ ನಿವಾರಿಸಲು ಹಲವಾರು ಪ್ರಯತ್ನಗಳನ್ನು ಕೈಗೊಂಡಿತು. ಗುಲಾಮಗಿರಿಯ ಸಂಪ್ರದಾಯವನ್ನು ಇಸ್ಲಾಮ್ ಬಹಳ ಕೆಟ್ಟದೆಂದು ಘೋಷಿಸಿತು. ಇಸ್ಲಾಮ್ ಈ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಿದುದಲ್ಲದೆ ಅವರೊಳಗೆ ಸ್ವಯಂ ವಿಶ್ವಾಸ ಉಂಟಾಗಲು ಪ್ರಯತ್ನಿಸಿತು. ಮುಹಮ್ಮದ್ ಪೈಗಂಬರರು ಮಕ್ಕಾದ ಕೆಲವು ಗುಲಾಮರನ್ನು ಅವರು ಇಸ್ಲಾಮ್ ಮತವನ್ನು ಸ್ವೀಕರಿಸಿದ ನಂತರ ಇತರರ ಮೇಲೆ ಆಫೀಸರನ್ನಾಗಿ ಮಾಡಿದ್ದರು. ಕೆಲವು ಸಾರಿ ಈ ಗುಲಾಮರ ಹಿಂದಿನ ಯಜಮಾನರು ಅವರ ಕೈಕೆಳಗಿನ ನೌಕರರಾಗಿದ್ದರು. ಇದರಿಂದ ಮನುಷ್ಯರ ಮಧ್ಯೆ ಇರುವ ವ್ಯತ್ಯಾಸ ನಿವಾರಿಸಿದಂತಾಯಿತು.

ಮುಹಮ್ಮದ್ ಪೈಗಂಬರರು ತನ್ನ ವರ್ತನೆಯಿಂದ ಮಾನವೀಯ ಸಮತ್ವವನ್ನು ಯಾವ ರೀತಿ ನೆಲೆನಿಲ್ಲಿಸಿದರು ಎಂಬುದನ್ನು ಚರಿತ್ರೆಯ ಒಂದು ಸಂಭವದಿಂದ ನಮಗೆ ತಿಳಿಯಬಹುದಾಗಿದೆ. ಮಕ್ಕಾದ ಒಬ್ಬ ನೀಗ್ರೋ ಗುಲಾಮ ಒಮ್ಮೆ ಬಹಳ ಬೇಸರದಿಂದ ನಿಂತುಕೊಂಡು ತನ್ನ ಮೇಲಾದ ಅನ್ಯಾಯಗಳನ್ನು ಎಣಿಸುತ್ತಾ ಇದ್ದನು. ಜನರು ತನ್ನ ಮೇಲೆ ತೋರಿಸುತ್ತಿದ್ದ ದ್ವೇಷವನ್ನು ಅವನು ನೆನಪು ಮಾಡುತ್ತಾ ಇದ್ದನು. ಇಸ್ಲಾಮ್ ಮತ ಸ್ವೀಕರಿಸಿದ ನಂತರ ಆತನ ಮೇಲೆ ಹಿಂಸೆ ಹೆಚ್ಚಾಗಿದ್ದಿತು. ಹೀಗೆ ಯೋಚಿಸುತ್ತಾ ನಿಂತಿದ್ದಾಗ ಯಾರೋ ಫಕ್ಕನೆ ಹಿಂದಿನಿಂದ ಬಂದು ಆತನನ್ನು ಹಿಡಿದು ಆಲಿಂಗಿಸಿ ಪ್ರೀತಿಯಿಂದ ಆತನ ಕಣ್ಣುಗಳನ್ನು ಮುಚ್ಚಿದರು! ಪ್ರೀತಿಯ ಮಾತುಗಳನ್ನು ಸಹ ಆಡಲು ಯಾರೂ ಇಲ್ಲದ ಮಕ್ಕಾದಲ್ಲಿ ಈತನನ್ನು ಈ ರೀತಿ ಆಲಿಂಗಿಸಿದವರು ಯಾರಾಗಿರಬಹುದು? ಈರೀತಿ ತನ್ನನ್ನು ಸ್ನೇಹಿಸುವ ವ್ಯಕ್ತಿ ಲೋಕ ನಾಯಕ, ತನ್ನ ಯಜಮಾನ ಮುಹಮ್ಮದ್ ಪೈಗಂಬರರಲ್ಲದೆ ಬೇರೆ ಯಾರೂ ಆಗಿರಲಾರರೆಂದು ಆತನು ಬೊಬ್ಬಿಟ್ಟನು.

ಇಸ್ಲಾಮ್ ಅದರ ಉಪದೇಶಗಳ ಮೂಲಕ, ಅದರ ಕಾರ್ಯಗಳ ಮೂಲಕ ಲೋಕದಿಂದ ಈ ವರ್ಗ ಭೇದವನ್ನು ನಿವಾರಿಸಲು ಸಾಧ್ಯವಿರುವಷ್ಟು ಪ್ರಯತ್ನಿಸಿತು. ಅದರಲ್ಲಿ ವಿಜಯವೂ ದೊರಕಿತು. ಆದರೆ ನಮ್ಮ ದುರ್ಭಾಗ್ಯವಶಾತ್ ಈಗಿನ ಸುಸಂಸ್ಕೃತ ಪ್ರಪಂಚದಲ್ಲೂ ಜನರು ಈ ನಿಂದ್ಯ ವರ್ಗಭೇದವನ್ನು ಅನುಸರಿಸುವರು.

ಆದುದರಿಂದ ಮಾನವೀಯತೆಯಲ್ಲಿ ಸ್ನೇಹವಿರುವ ಜನರೇ, ಇತರರಿಗಾಗಿ ದುಃಖಿಗೊಳ್ಳುವ ಹೃದಯವಿರುವವರೇ, ದೇವರ ಪ್ರೀತಿಯನ್ನು ಸಂಪಾದಿಸಲಿಕ್ಕೂ ಮನುಷ್ಯ ವಂಶದ ಒಳಿತಿಗಾಗಿಯೂ ನಾವೆಲ್ಲಾ ಸೇರಿ ಈ ವರ್ಣ ಭೇದವನ್ನು ಲೋಕದಿಂದ ನಿವಾರಿಸುವಾ. ಈ ಶಾಪದಿಂದ ನಮ್ಮ ದೇಶವನ್ನು ಮಾತ್ರವಲ್ಲ, ಇಡೀ ಪ್ರಪಂಚವನ್ನೇ ಮುಕ್ತಗೊಳಿಸುವಾ.

# ಹಝ್ರತ್ ಅಹ್ಮದರ ಉಪದೇಶಗಳು



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್.**

ಸ್ವಹಿತಕ್ಕಿಂತಲೂ ಸ್ವಶ್ವಾಸಕ್ಕಿಂತಲೂ ಮಾತ್ರವಲ್ಲ ನಿಮ್ಮ ಎಲ್ಲಾ ಬಂಧಗಳಿಗಿಂತಲೂ ನಿಮಗೆ ಪ್ರಿಯನು ಪರಮಾತ್ಮನಾಗಿರಲಿ. ಯಾವುದೇ ಬಿರುಗಾಳಿಯಾಗಲೀ ನಿಮ್ಮನ್ನು ಅಲುಗಾಡಿಸದ ರೀತಿಯಲ್ಲಿ ಅವನ ದಾರಿಯಲ್ಲಿ ನೀವು ಸ್ಥೈರ್ಯವುಳ್ಳವರಾಗಿರಿ. ಲೋಕವು ಅದರ ಉಪಕರಣಗಳಲ್ಲಿ ನಂಬಿಕೆಯನ್ನಿಡುತ್ತದೆ; ಅಲ್ಲದೆ ಅದರ ಒಳ್ಮೆಯ ವಸ್ತುಗಳಿಗಿಂತ ಅದು ದೈವವನ್ನು ಗಣಿಸುವುದಿಲ್ಲ. ಆದರೆ ನೀವು ಪರಮಾತ್ಮನನ್ನು ಮಾತ್ರ ಆಶ್ರಯಿಸಿ ಸ್ವರ್ಗದಲ್ಲಿ ಅವನ ಇಷ್ಟಜನರೊಡನೆ ಗಣಿಸಲ್ಪಡಲಿಕ್ಕಾಗಿ ಅವನನ್ನು ಸರ್ವೋಪರಿಯಾಗಿ ಗಣಿಸಿರಿ. ಪುರಾತನ ಕಾಲದಿಂದಲೇ ಭಗವಂತನು ತನ್ನ ಕಾರುಣ್ಯವನ್ನು ಪ್ರಕಟಿಸುತ್ತಲೇ ಇದ್ದಾನೆ. ಆದರೆ ನೀವು ಅವನೊಡನೆ ಏಕೋಪಿಸದೆಯೂ ಅವನ ಧರ್ಮಶಾಸನಗಳನ್ನೆಲ್ಲಾ ನಿರ್ವಹಿಸದೆಯೂ ಇದ್ದರೆ ನಿಮಗೆ ಅವನ ಕರುಣಾಮೃತವನ್ನು ಪಾನಮಾಡಲು ಸಾಧ್ಯವಿಲ್ಲ. ಅವನ ಅಭೀಷ್ಟವನ್ನು ನಿಮ್ಮ ಅಭೀಷ್ಟವೆಂಬಂತೆಯೂ ಅವನ ಆವಶ್ಯಕತೆಗಳು ನಿಮ್ಮ ಆವಶ್ಯಕತೆಗಳಾಗಿಯೂ ಇರಬೇಕಾಗಿದೆ. ದುರ್ಘಟ ಕಾಲಗಳಲ್ಲಿ ನೀವು ಅವನ ಮೇಲೆ ಭರವಸೆಯನ್ನಿಟ್ಟು, ನಿಮ್ಮ ಆಲಾಪಗಳಿಗೆ ಅವನು ಉತ್ತರಿಸಿದರೂ ಇಲ್ಲವಾದರೂ ಅವನ ಬಾಗಿಲ ಬಳಿಯಲ್ಲೇ ಇದ್ದುಕೊಳ್ಳಿರಿ. ಎಲ್ಲಾ ರೀತಿಯಲ್ಲೂ ಅವನ ಅಭಿಮತದಂತೆ ವರ್ತಿಸಿರಿ. ಹಾಗೆ ನೀವು ಅವನನ್ನು ಆಶ್ರಯಿಸುವಿರಾದರೆ ಬಹಳ ಕಾಲದಿಂದಲೂ ಲೋಕದಿಂದ ತನ್ನ ಮುಖವನ್ನು ಮರೆಯಾಗಿರಿಸಿದ ಆ ಭಗವಂತನು ತಾನೇ ನಿಮಗೆ ಪ್ರತ್ಯಕ್ಷನಾಗುವನು. ಈ ನಿಯಮವನ್ನು ಸಂಪೂರ್ಣವಾಗಿ ಅನುಸರಿಸಲಿಕ್ಕೂ ದೈವಿಕ ತೀರ್ಪಿಗೆ ಶಿರಬಾಗಿ ಅವನ ಅಭೀಷ್ಟವನ್ನು ನಿರ್ವಹಿಸಲಿಕ್ಕೂ ಬದ್ಧಶ್ರದ್ಧರಾಗಿರುವವರು ನಿಮ್ಮಲ್ಲಿ ಯಾರಾದರಿರುವರೇ? ವಿಪತ್ತುಗಳು ನಾಲ್ಕು ಕಡೆಗಳಿಂದಲೂ ನಿಮ್ಮನ್ನು ಆವರಿಸುವಾಗ ಅವನಲ್ಲಿ ನಿಮ್ಮ ನಂಬಿಕೆ ವರ್ಧಿಸಬೇಕಾಗಿದೆ.

# ಮುಹಮ್ಮದ್ ಪೈಗಂಬರರ ನುಡಿ ಮುತ್ತುಗಳು

1. ಕಿರಿಯರನ್ನು ವಾತ್ಸಲ್ಯದಿಂದ ಕಾಣಿರಿ ಮತ್ತು ಅವರಿಗೆ ಉತ್ತಮ ವಿದ್ಯಾಭ್ಯಾಸವನ್ನು ಕೊಡಿರಿ.

2. ಒಬ್ಬ ತಂದೆಯು ತನ್ನ ಮಗನಿಗೆ ಅವನನ್ನು ಉತ್ತಮ ರೀತಿಯಲ್ಲಿ ಸಾಕಿ ಸಲಹುವುದಕ್ಕಿಂತ ಮಿಗಿಲಾದ ಕಾಣಿಕೆಯನ್ನು ಕೊಡಲಾರ.

3. ಓರ್ವನಿಗೆ ಒಬ್ಬಳು ಮಗಳಿದ್ದು ಅವಳನ್ನು ಅವನು ಜೀವಂತ ಹೂಳಿಡದೆ, ಅವಳ ತೇಜೋಭಂಗ ಮಾಡದೆಯೂ ಮತ್ತೊಬ್ಬ ಮಗನಿಗೆ ಅವಳಿಗಿಂತಲೂ ಮೇಲ್ಮೆಯನ್ನು ಕಲ್ಪಿಸದೆಯೂ ಇರುವನಾದರೆ ಆ ತಂದೆಗೆ ಪರಮಾತ್ಮನು ಸ್ವರ್ಗವನ್ನು ಕೊಡುವನು.

4. ಅಲ್ಲಾಹುವಿನೊಡನೆ ನಿಮಗಿರುವ ಕರ್ತವ್ಯವನ್ನು ಪಾಲಿಸಿರಿ ಮತ್ತು ನಿಮ್ಮ ಮಕ್ಕಳೆಲ್ಲರನ್ನೂ ಸಮತೆಯಿಂದ ಕಾಣಿರಿ.

5. ನೀವು ನಿಮ್ಮ ಹೆತ್ತವರೊಡನೆ ಉದಾರತೆಯಿಂದ ವರ್ತಿಸಿರಿ; ನಿಮ್ಮ ಮಕ್ಕಳು ನಿಮ್ಮೊಡನೆ ಅಂತೆಯೇ ವರ್ತಿಸುವರು.

6. ಸ್ವರ್ಗವು ಮಾತೆಯ ಕಾಲಡಿಯಲ್ಲಿದೆ.

7. ಒಬ್ಬನು ತನ್ನ ತಂದೆಯನ್ನು ಕ್ರೋಧದಿಂದ ಒಮ್ಮೆ ವೀಕ್ಷಿಸಿದರೆ, ತನ್ನ ಮೇಲೆ ಅನುಗ್ರಹ ಬೀರಲ್ಪಡುವುದರಿಂದ ಆತನು ವಂಚಿತನಾಗುವನು.

8. ನಿಮ್ಮ ನೆರೆಕರೆಯವರಿಗೆ ನಿಮ್ಮಲ್ಲಿ ಕೆಲವು ಹಕ್ಕುಗಳಿವೆ.

9. ತನ್ನ ನೆರೆಕರೆಯವರೊಡನೆ ಅಸಭ್ಯತೆಯಿಂದ ವರ್ತಿಸುವವನು ಮೂಮಿನ್ (ವಿಶ್ವಾಸಿ) ಅಲ್ಲ.

10. ತನ್ನ ನೆರೆಕರೆಯವರ ದುಃಖದಲ್ಲಿ ಪಾಲುಗೊಳ್ಳದವನು ವಿಶ್ವಾಸಿಯಲ್ಲ.

11. ನಿನ್ನ ನೆರೆಕರೆಯವರು ನಿನ್ನನ್ನು ಹೊಗಳಿದರೆ ನೀನು ಉತ್ತಮನಾಗಿರುವೆ; ಅವರು ನಿನ್ನನ್ನು ದೂಷಿಸುವರಾದರೆ ನೀನು ಉತ್ತಮನಲ್ಲ.

12. ಅತಿ ಚಿಕ್ಕ ಒಳಿತನ್ನು ಮಾಡುವ ಸಂದರ್ಭವನ್ನೂ ನಿಮ್ಮಲ್ಲಿ ಯಾರೂ ಕಳೆದುಕೊಳ್ಳಬಾರದು. ನಿಮ್ಮ ಸಹೋದರರಿಗೆ ಏನನ್ನು ಮಾಡಲಿಕ್ಕೂ ನಿಮ್ಮಿಂದ ಸಾಧ್ಯವಾಗದಿದ್ದರೆ, ಕಡಿಮೆ ಪಕ್ಷ ಅವರನ್ನು ಮುಗುಳ್ನಗೆಯಿಂದ ಭೇಟಿಯಾಗಿರಿ.

13. ತನ್ನ ನೆರೆಕರೆಯವರು ಹಸಿವೆಯಿಂದಿರುವಾಗ ಹೊಟ್ಟೆತುಂಬಾ ತಿನ್ನುವವನು ವಿಶ್ವಾಸಿಯಲ್ಲ.

14. ತನಗೆ ಸಂಬಂಧವಿರುವ ಯಾ ಇಲ್ಲದಿರುವ ಅನಾಥ ಶಿಶುವನ್ನು ಒಬ್ಬನು ಉತ್ತಮ ರೀತಿಯಲ್ಲಿ ಸಾಕಿ ಸಲಹಿದರೆ, ನನ್ನ ಒಂದನೆಯ ಬೆರಳು ಎರಡನೆಯ ಬೆರಳಿಗೆ ಎಷ್ಟು ಹತ್ತಿರವೋ ಅಷ್ಟೇ ಹತ್ತಿರದಲ್ಲಿ ಆತನು ನನ್ನೊಂದಿಗೆ ಸ್ವರ್ಗದಲ್ಲಿರುವನು.

15. ಎರಡು ಬಲಹೀನ ವರ್ಗದವರ ಹಕ್ಕನ್ನು ಅಪಹರಿಸುವುದರಿಂದ ನಾನು ನಿಮ್ಮನ್ನು ವಿರೋಧಿಸಿರುವೆನು—ಅನಾಥರ ಮತ್ತು ಸ್ತ್ರೀಯರ.

16. ನಿಮ್ಮ ಸೇವಕರನ್ನು ಪ್ರೀತಿಯಿಂದ ಕಾಣಿರಿ; ನೀವು ಭಕ್ಷಿಸುವುದನ್ನೇ ಅವರಿಗೂ ಊಯಿರಿ, ನೀವು ಉಡುವುದನ್ನೇ ಅವರಿಗೂ ಉಡಲು ಕೊಡಿರಿ. (ನೀವು ಧರಿಸುವುದು ಬೆಲೆಬಾಳುವ ವಸ್ತ್ರವಾಗಿದ್ದರೆ ನಿಮ್ಮ ಸೇವಕರಿಗೂ ಅಂಥಹ ಬೆಲೆಬಾಳುವ ವಸ್ತ್ರವನ್ನೇ ಕೊಡಿರಿ.)

17. ನಿರಪರಾಧಿಯಾದ ಸೇವಕನ ಮೇಲೆ ಆರೋಪ ಹೊರಿಸುವವನು ವಿಚಾರಣಾ ದಿನದಂದು ಥಳಿಸಲ್ಪಡುವನು.

ಸಂಗ್ರಹ: ಎಂ. ಪಿ. ಐ.

# ಸೌಹಾರ್ದದ ಕರೆ

[ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಅಹ್ಮದ್‌ರವರು 1908ನೇ ಇಸವಿಯಲ್ಲಿ ತನ್ನ ಮರಣದ ಎರಡು ದಿವಸ ಮೊದಲು ಭಾರತೀಯರಿಗೆ ನೀಡಿದ ಅಂತ್ಯ ಸಂದೇಶದ ಕೆಲವು ಭಾಗಗಳು. —ಸಂಪಾದಕ.]

ಸ್ನೇಹಿತರೇ, ಹಿಂದುಗಳೋ, ಮುಸ್ಲಿಮರೋ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ, ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಹ ಸಾಮೂಹಿಕ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ಆತ್ಮೀಯತೆಯಿಂದಲೂ ನಿಷ್ಕಳಂಕತೆಯಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ, ಮತಪರವೂ ಲೌಕಿಕವೂ ಆದ ಎಲ್ಲಾ ವೈಷಮ್ಯಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಸಹಕರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶ ಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಮತವು ಯಥಾರ್ಥವಾದ ಮತವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹಗಳನ್ನು ಪ್ರತಿಯೊಂದು ಜಾತಿಯವರಿಗೆ ನೀಡಿರುವನು. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲಾ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂಥಹ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬಿಯರಿಗೂ, ಪಾರ್ಸಿಯರಿಗೂ, ಸಿರಿಯಾದವರಿಗೂ, ಚೀನಿಯರಿಗೂ ಜಪಾನಿಯರಿಗೂ ಯುರೋಪ್ಯನರಿಗೂ ಅಮೇರಿಕನ್ನರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವರ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ ನಕ್ಷತ್ರಾದಿಗಳು ಪ್ರಕಾಶವನ್ನು ಕೊಡುತ್ತವೆಯಲ್ಲದೆ ಅವುಗಳೊಡನೆ ದೇವರು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ನಿರ್ವಹಿಸುತ್ತವೆ. ಎಲ್ಲಾ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನಗಳನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಮನುಷ್ಯ ಕುಲಕ್ಕೆ ಒಳಿತನ್ನುಂಟು ಮಾಡಬೇಕೆಂದೂ ಸಂಕುಚಿತ ಮನೋಭಾವವಾಗಲೀ ಅಸಹಾನುಭೂತಿಯಾಗಲೀ ನಮ್ಮಲ್ಲಿ ಇರಬಾರದೆಂದೂ ಪರಮಾತ್ಮನ ಈ ವಿಶಾಲವಾದ ಉದಾರತೆ ನಮಗೆ ಕಲಿಸಿಕೊಡುತ್ತದೆ.

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳಿಗೊಪ್ಪುವಂತೆ ತಮ್ಮ ನಡೆವಳಿಕೆಗಳನ್ನು ರೂಪೀಕರಿಸದೆಯೂ ಇದ್ದರೆ ಅವರು ಬೇಗನೇ ನಾಶವಾಗುವರು. ಈ ಉಲ್ಲಂಘನೆಯ ದುಃಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ ಅವರ ಭಾವೀ ಸಂತಾನಗಳ ಮೇಲೆಯೂ ಉಂಟಾಗುವುದು. ಪರಮಾತ್ಮನ ಗುಣ ವಿಶೇಷಗಳನ್ನು ತಮ್ಮ ಜೀವಿತದಲ್ಲಿ ಅನುಸರಿಸುವುದು ಮಾನವರ ಬಾಳಿಕೆಗಿರುವ ಒಂದು ಜೀವಜಲವಾಗಿದೆ. ಶಾಂತಿ ಸಮಾಧಾನಗಳ ಉದ್ಭವ ಸ್ಥಾನವಾದ ಪವಿತ್ರ ದೈವಿಕ ಗುಣಗಳನ್ನನುಸರಿಸಿ ಜೀವನ ಕ್ರಮವನ್ನು ರೂಪೀಕರಿಸುವುದರಲ್ಲಿ ಮಾತ್ರ

ಮನುಷ್ಯನ ಶಾರೀರಿಕ ಮತ್ತು ಆಧ್ಯಾತ್ಮಿಕ ಜೀವನ ಅವಲಂಬಿಸಿದೆ. ಈ ಪರಮಾರ್ಥವನ್ನು ಲೋಕಾರಂಭದಿಂದ ಈ ವರೆಗಿನ ಎಲ್ಲಾ ರಾಜ್ಯಗಳ ಸತ್ಯಸಂಧರಾದ ಎಲ್ಲಾ ದೇವದಾಸರು ಸಾಕ್ಷೀಕರಿಸಿರುವರು.

ಈ ವಿಶಾಲವಾದ ತತ್ವವನ್ನು ಪ್ರಬೋಧಿಸುವ ಒಂದು ವಾಕ್ಯದಿಂದ ಪರಮಾತ್ಮನು ಪವಿತ್ರ ಖುರ್‌ಆನಿನ 'ಫಾತಿಹಾ' ಎಂಬ ಪ್ರಥಮ ಅಧ್ಯಾಯವನ್ನು ಆರಂಭಿಸಿರುವನು. ನೋಡಿರಿ: "ಅಲ್‌ಹಮ್ದು ಅಲ್ಲಾಹಿ ರಬ್ಬಿಲ್ ಆಲಮೀನ್'' ಅಂದರೆ "ಸಕಲ ಸ್ತುತಿ ಸ್ತೋತ್ರಗಳು ಸರ್ವಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ಅಲ್ಲಾಹುವಿಗೆ ಸಲ್ಲುವುವು.'' ಇಲ್ಲಿ ಲೋಕಗಳು ಎಂಬ ಶಬ್ದದಲ್ಲಿ ಎಲ್ಲಾ ಜನಾಂಗದವರೂ ಎಲ್ಲಾ ಕಾಲದವರೂ ಎಲ್ಲಾ ರಾಜ್ಯದವರೂ ಒಳಪಡುತ್ತಾರೆ. ದೈವಾನುಗ್ರಹಗಳು ತಮಗೆ ಮಾತ್ರ ಲಭಿಸಿರುವುದೆಂದು ಅಭಿಪ್ರಾಯಪಟ್ಟು ಇತರ ಜನಾಂಗದವರು ಮನುಷ್ಯ ವರ್ಗದವರಲ್ಲವೆಂಬ ರೀತಿಯಲ್ಲೂ, ದೇವರು ಅವರನ್ನು ಸೃಷ್ಟಿಸಿದ ನಂತರ ಅವನ್ನು ಮರೆಶಿರುವನೆಂದೋ ಕೈಬಿಟ್ಟಿರುವನೆಂದೋ ಅವರು ಅವನ ಸೃಷ್ಟಿಗಳೇ ಅಲ್ಲವೆಂಬ ರೀತಿಯಲ್ಲೂ ಭಾವಿಸಿ ದೇವರ ಸರ್ವವ್ಯಾಪಕವಾದ ಕೃಪಾಕಟಾಕ್ಷವನ್ನು ಇತರರಿಗೆ ಅಲ್ಲಗಳೆಯುವ ಎಲ್ಲಾ ಜಾತಿಯವರಿಗೂ ಪ್ರಸ್ತುತ ಖುರ್‌ಆನ್ ವಾಕ್ಯ ಒಂದು ಖಂಡನೆಯಾಗಿದೆ.... ... ಸರ್ವಲೋಕಗಳ ರಕ್ಷಕನೂ ಪರಿಪಾಲಕನೂ ಆದ ಪರಮಾತ್ಮನು ಪಕ್ಷಪಾತವನ್ನು ತೋರಿಸುವ ರೀತಿಯಲ್ಲಿ ಒಂದು ಪ್ರತ್ಯೇಕ ಜನಾಂಗದವರಲ್ಲಿ ಮಾತ್ರ ಶ್ರದ್ಧೆಯಿಟ್ಟಿದ್ದಾನೆಂಬುದು ತುಂಬಾ ಅಸಂಗತವಾಗಿದೆ. ಇಂತಹ ಅಬದ್ಧ ಸಿದ್ಧಾಂತಗಳನ್ನು ನಿರಾಕರಿಸುವುದಕ್ಕಾಗಿ "ಸರ್ವಸ್ತುತಿ – ಸ್ತೋತ್ರಗಳು ಅಖಿಲ ಲೋಕಗಳ ರಕ್ಷಕನೂ ಪರಿಪಾಲಕನೂ ಆದ ಅಲ್ಲಾಹುವಿಗೆ ಸಲ್ಲುವುವು'' ಎಂಬ ವಚನದಿಂದ ಪವಿತ್ರ ಖುರ್‌ಆನ್ ಪ್ರಾರಂಭವಾಗುತ್ತದೆ.

ಪರಮಾತ್ಮನು ಯಾವುದಾದರೊಂದು ಪ್ರತ್ಯೇಕ ಜನಾಂಗದವರಲ್ಲಿ ಅಥವಾ ಪ್ರತ್ಯೇಕ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು ನಿಯೋಗಿಸಿರುವನೆಂಬ ವಿಶ್ವಾಸವು ತಪ್ಪೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಸ್ಥಳಗಳಲ್ಲಿ ದೇವರು ನುಡಿದಿರುವನು. ಆಧ್ಯಾತ್ಮಿಕ ಜ್ಞಾನವನ್ನು ನೀಡುವುದರಲ್ಲಿ ಯಾವ ಗೋತ್ರದವರನ್ನಾಗಲೀ ದೇಶದವರನ್ನಾಗಲೀ ಅವನು ಮರೆತಿಲ್ಲ. ಈ ಸಂಗತಿಯನ್ನು ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಉಪಯುಕ್ತ ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ಪರಮಾತ್ಮನು ಎಲ್ಲಾ ಸಮುದಾಯದವರಿಗೂ ದೇಶದವರಿಗೂ ಅವರ ಭೌತಿಕಾವಶ್ಯಕತೆಗಳನ್ನು ಪೂರೈಸಲು ಸಕಲವಿಧ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಹಾಗೆಯೇ ಎಲ್ಲಾ ಜನಾಂಗದವರ ಮತ್ತು ಎಲ್ಲಾ ದೇಶದವರ ಆಧ್ಯಾತ್ಮಿಕ ಆವಶ್ಯಕತೆಗಳಿಗಾಗಿಯೂ ಎಲ್ಲಾ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನಿನ ಒಂದೆಡೆಯಲ್ಲಿ ಹೀಗೆ ಹೇಳಲಾಗಿದೆ: "ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಪೀಹಾ ನದೀರ್'' ಅಂದರೆ ಒಬ್ಬ ಮುನ್ನೆಚ್ಚರಿಕೆಯನ್ನೀಯುವವನು (ಉಪದೇಶಕನು) ಬಂದಿರದ ಒಂದು ಸಮುದಾಯವಾಗಲೀ ಇಲ್ಲ'' (35:24).

ಆದುದರಿಂದ ನಾವೆಲ್ಲರೂ ವಿಶ್ವಾಸವಿಡಬೇಕಾದ ಸಕಲ ಸಂಪೂರ್ಣನೂ ಸತ್ಯಸ್ವರೂಪನೂ ಆದ ಪರಮಾತ್ಮನು ಸರ್ವ ಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂಬುದು ಅವಿತರ್ಕಿತವಾಗಿದೆ. ಅವನ ಪರಿಪಾಲನೆಯು ಯಾವುದಾದರೊಂದು ಪ್ರತ್ಯೇಕ ಜಾತಿಗೋ ಪ್ರತ್ಯೇಕ ಕಾಲಕ್ಕೋ ಪ್ರತ್ಯೇಕ ರಾಜ್ಯಕ್ಕೋ ಸೀಮಿತವಾದುದಲ್ಲ. ಅವನು ಎಲ್ಲಾ ಜಾತಿಯವರ ಎಲ್ಲಾ ಕಾಲಗಳ ಎಲ್ಲಾ ರಾಜ್ಯಗಳ ಪಾಲಕನಾಗಿದ್ದಾನೆ. ಸಕಲ ಅನುಗ್ರಹಗಳ ಮೂಲ ಅವನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲಾ ಸೃಷ್ಟಿಗಳನ್ನೂ ಸಾಕಿ ಸಲಹುವವನು ಅವನೇ ಆಗಿದ್ದಾನೆ. ಎಲ್ಲಾ ವಸ್ತುಗಳೂ ಅವನನ್ನೇ ಆಶ್ರಯಿಸಿಕೊಂಡಿವೆ ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವವ್ಯಾಪಕವಾಗಿದೆ. ಅವನ ಕೃಪೆಯು ಕುರಿತು ಯಾರೂ ಆಕ್ಷೇಪಿಸದ ರೀತಿಯಲ್ಲಿ ಅದು ಸರ್ವವ್ಯಾಪಿಯಾಗಿದೆ. ಪರಮಾತ್ಮನು ಅವನ ಅನುಗ್ರಹಗಳನ್ನು ಇತರರಿಗಲ್ಲದೆ ತಮಗೆ ಕರುಣಿಸಲಿಲ್ಲವೆಂದೋ, ಪರಮಾತ್ಮನಿಂದ ಮಾರ್ಗದರ್ಶಕ ಗ್ರಂಥಗಳು ಇತರರಿಗಲ್ಲದೆ ತಮಗೆ ಲಭಿಸಲಿಲ್ಲವೆಂದೋ, ಪರಮಾತ್ಮನು ತನ್ನ ವಚನ, ಪ್ರಕಟಣೆ ಹಾಗೂ ದೃಷ್ಟಾಂತಗಳ ಮುಖಾಂತರ ಹಿಂದಿನ ಕಾಲದಲ್ಲಿ ಅಲ್ಲದೆ ತಮ್ಮ ಕಾಲದಲ್ಲಿ ಪ್ರತ್ಯಕ್ಷನಾಗಲಿಲ್ಲವೆಂದೋ ಯಾವುದೇ ಜನಾಂಗಕ್ಕೂ ಹೇಳುವರೆ ಅವನು ಎಡೆಗೊಡಲಿಲ್ಲ. ಹಾಗೆ ಆ ಸರ್ವವಲ್ಲಭನು

ತನ್ನ ಭೌತಿಕ ಮತ್ತು ಆಧ್ಯಾತ್ಮಿಕ ಅನುಗ್ರಹಗಳಿಂದ ಯಾವುದಾದರೊಂದು ಸಮುದಾಯವನ್ನೋ ಕಾಲವನ್ನೋ ಬಿಡದೆ ತನ್ನ ಕೃಪಾವಿತರಣೆಯನ್ನು ಸರ್ವವ್ಯಾಪಕವನ್ನಾಗಿಯೂ ನಿತ್ಯವನ್ನಾಗಿಯೂ ಮಾಡಿರುವನು.

ಹೀಗೆ ಪರಮಾತ್ಮನ ಅನುಗ್ರಹ ನಿಸ್ಸೀಮವೂ ಸರ್ವವ್ಯಾಪಕವೂ ಆಗಿರುವಾಗ, ಅವನ ದಿವ್ಯಗುಣಗಳನ್ನು ನಾವು ನಮ್ಮ ಜೀವನ ಕ್ರಮದಲ್ಲಿ ತಂದು, ಅದಕ್ಕನುಸಾರವಾಗಿ ನಮ್ಮ ಸ್ವಭಾವಗಳನ್ನು ಕ್ರಮ ಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ. ಎಲೈ ದೇಶಬಾಂಧವರೇ, ಈ ವಿಶಾಲವಾದ ಮನೋಭಾವದೆಡೆಗೆ ನಿಮ್ಮನ್ನು ಆಮಂತ್ರಿಸಲಿಕ್ಕಾಗಿ ಈ ವಿಜ್ಞಾಪನೆಯನ್ನು ನಿಮ್ಮ ಸಮಕ್ಷಮ ಸಮರ್ಪಿಸುತ್ತೇನೆ. ಸ್ನೇಹಭಾವದ ಈ ಆಮಂತ್ರಣದ ಮರೆಯಲ್ಲಿ ನನಗೆ ಸ್ವಾರ್ಥಪರವಾದ ಉದ್ದೇಶವೇನಾದರೂ ಉಂಟೆಂದು ನೀವು ಭಾವಿಸದಿರಲಿಕ್ಕಾಗಿ, ಸರ್ವಶಕ್ತನಾದ ಪರಮಾತ್ಮನೇ ನಿಮ್ಮ ಹೃದಯಗಳಲ್ಲಿ ಸತ್ಯವನ್ನು ಪ್ರಕಟಿಸಲೆಂದೂ, ನಿಮ್ಮ ಕ್ಷೇಮಾಭಿವೃದ್ಧಿಗಳಿಗಾಗಿ ನನ್ನ ಹೃದಯದಲ್ಲಿರುವ ಆ ಇಚ್ಛೆಯ ರಹಸ್ಯವನ್ನು ಅವನೇ ನಿಮಗೆ ಬೋಧ್ಯಪಡಿಸಲೆಂದೂ ನಾನು ಸಹೃದಯತೆಯಿಂದ ಪ್ರಾರ್ಥಿಸುತ್ತೇನೆ.

* * *

ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನೂ ಮಹಾತ್ಮರನ್ನೂ ನಿಂದಿಸುವುದೂ ಆಕ್ಷೇಪಿಸುವುದೂ ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟು ಮಾಡಿ ಮತಪರವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯನ್ನುಂಟು ಮಾಡುವ ಒಂದು ಭಯಂಕರ ವಿಷವೆಂದು ದೀರ್ಘ ಕಾಲದ ಅನುಭವಗಳೂ ವಿವಿಧ ಸಂದರ್ಭಗಳಲ್ಲಿ ನಡೆದ ಪರೀಕ್ಷಾ ಸಂಭವಗಳೂ ನಮಗೆ ರುಜು ಪಡಿಸಿರುತ್ತವೆ. ಯಾವ ರಾಜ್ಯದ ನಿವಾಸಿಗಳು ಅನ್ಯೋನ್ಯ ಮತಾಚಾರ್ಯರನ್ನು ಅವಹೇಳಿಸುತ್ತಾರೋ ಅವರಿಗೆ ಶಾಂತಿಯ ಜೀವಿತ ಸಾಧ್ಯವಲ್ಲ. ಒಂದು ಸಮುದಾಯವು ಇನ್ನೊಂದು ಸಮುದಾಯದ ಪ್ರವಾದಿಗಳನ್ನು ಅಥವಾ ಎರಡೂ ಸಮುದಾಯಗಳು ಅನ್ಯೋನ್ಯ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ಪರಸ್ಪರ ಯಥಾರ್ಥ ಐಕ್ಯ ಮತ್ತು ಮೈತ್ರಿಯೇರ್ಪಡಲಾರದು. ತಾನು ನಂಬಿ ಆದರಿಸುವ ಪ್ರವಾದಿಯನ್ನೋ ಮತಾಚಾರ್ಯನನ್ನೋ ಇನ್ನೊಬ್ಬನು ನಿಂದಿಸುವುದನ್ನು ಕೇಳಿದಾಗ ಯಾರಿಗೆತಾನೇ ರೋಷವುಂಟಾಗಲಾರದು? ಮುಸ್ಲಿಮರು ತಮ್ಮ ಪ್ರವಾದಿಯನ್ನು ದೈವವೆಂದೋ ದೈವಪುತ್ರನೆಂದೋ ಭಾವಿಸುವುದಿಲ್ಲವಾದರೂ, ಅವರಿಗೆ ಮನುಷ್ಯರಲ್ಲಿ ಅತ್ಯುತ್ತಮ ಸ್ಥಾನವನ್ನು ಕಲ್ಪಿಸುವುದರಿಂದ ಆ ಮಹಾತ್ಮರನ್ನು ಸಂಬಂಧಿಸಿ ಮಾತನಾಡುವಾಗ ಗೌರವಾದರಗಳಿಂದ ಕೂಡಿರದ ಪಕ್ಷದಲ್ಲಿ ಒಬ್ಬ ಯಥಾರ್ಥ ಮುಸ್ಲಿಮನೊಡನೆ ಸ್ನೇಹಬಂಧವನ್ನು ಸ್ಥಾಪಿಸಲು ಒಬ್ಬ ಮುಸ್ಲಿಮೇತರನಿಗೆ ಒಮ್ಮೆಯೂ ಸಾಧ್ಯವಿಲ್ಲ.

ನಾವು ಇತರ ಸಮುದಾಯಗಳ ಪ್ರವಾದಿಗಳನ್ನು ಒಮ್ಮೆಯೂ ನಿಂದಿಸುವುದಿಲ್ಲ. ತದ್ವಿರುದ್ಧವಾಗಿ, ಪ್ರಪಂಚದಲ್ಲಿ ಹಲವು ಕಾಲಘಟ್ಟಗಳಲ್ಲಿ ವಿವಿಧ ಜಾತಿಗಳೆಡೆಯಲ್ಲಿ ಆಗಮಿಸಿದ ಎಲ್ಲಾ ಪ್ರವಾದಿಗಳನ್ನು ನಂಬಿ ಆದರಿಸುತ್ತೇವೆ. ಆ ಮಹಾತ್ಮರನ್ನು ಕೋಟಿಗಟ್ಟಲೆ ಜನರು ನಂಬಿ, ಅವರ ಹೆಸರಿನಲ್ಲಿ ಲೋಕದ ಯಾವುದಾದರೊಂದು ಕಡೆಯಲ್ಲಿರುವ ಒಂದು ಜನವಿಭಾಗ ಅನೇಕ ಯುಗಗಳಿಂದ ಸ್ನೇಹಾದರಗಳನ್ನು ಅರ್ಪಿಸುತ್ತಾ ಬರುತ್ತಿರುವುದೇ ಆ ಮಹಾತ್ಮರ ಸತ್ಯತೆಗೆ ತಕ್ಕುದಾದ ಸಾಕ್ಷ್ಯವಾಗಿದೆ. ಅವರು ದೈವನಿಯುಕ್ತರಾದ ಸತ್ಯ ಪುರುಷರಲ್ಲವಾಗಿದ್ದರೆ ಅವರ ಹೆಸರಿನಲ್ಲಿ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಸ್ಥಾಯಿಯಾದ ಭಕ್ತಿ ವಿಶ್ವಾಸಗಳು ನೆಲೆಗೊಂಡಿರಲಿಕ್ಕೆ ಸಾಧ್ಯವಿಲ್ಲ. ಪರಮಾತ್ಮನು ನಿಯೋಗಿಸಿ ಕಳುಹಿಸುವ ಮಹಾತ್ಮರಿಗೆ ಲಭಿಸುವ ರೀತಿಯ ಗೌರವಾದರಗಳು ಅನ್ಯರಿಗೆ ಲಭಿಸುವರೆ ಆ ಭಕ್ತವತ್ಸಲನು ಒಮ್ಮೆಯೂ ಎಡೆಗೊಡಲಾರನು. ಒಬ್ಬ ಮಿಥ್ಯವಾದಿ ಸತ್ಯಾಪ್ರವಾದಿಯಂತೆ ಅಭಿನಯಿಸಿ ಅವರ ಸ್ಥಾನವನ್ನು ಸ್ವಾಧೀನಪಡಿಸಲು ಭಾವಿಸುವನಾದರೆ ಅವನು ಹೆಚ್ಚು ವಿಳಂಬವಾಗದೆ ನಾಶ ಹೊಂದುವನು. ಇದೇ ಆಧಾರದಿಂದ ನಾವು ವೇದಗಳನ್ನು ದೈವಿಕವೆಂದು ನಂಬಿ, ವೈದಿಕ ಋಷಿಗಳನ್ನು ಮಹಾತ್ಮರೆಂದು ಗೌರವಿಸುತ್ತೇವೆ.... ಅವಶೀರ್ಣವಾಗಿ ಸಾವಿರಗಟ್ಟಲೆ ವರ್ಷಗಳು ಕಳೆದ ಕಾರಣ ಹಲವು ಕಾಲಘಟ್ಟಗಳಲ್ಲಿ ವೇದದ ಭಾಷ್ಯಕಾರರು ಅದರಲ್ಲಿ ಹಲವು ವಿಧದ ಹೆಚ್ಚು ಕಮ್ಮಿಗಳನ್ನು ಮಾಡಿರುವುದು ಸಂಭಾವ್ಯವಾಗಿದೆ. ಆದರೆ ಆರ್ಯಾವರ್ತದ ಕೋಟ್ಯಾನು ಕೋಟಿ ಜನರು

ಸಹಸ್ರಾರು ವರ್ಷಗಳಿಂದ ವೇದವನ್ನು ದೈವಪ್ರೋಕ್ತ ವೆಂದು ನಂಬಿಕೊಂಡು ಬರುತ್ತಿರುವರೆಂಬುದೇ ಅದರ ಸತ್ಯತೆಗೆ ನಮಗೆ ತಕ್ಕುದಾದ ಸಾಕ್ಷ್ಯವಾಗಿದೆ. ವೇದಕ್ಕೆ ಸಿದ್ಧಿಸಿರುವ ರೀತಿಯ ಗೌರವಾದರಗಳು ಒಬ್ಬ ವ್ಯಾಜವಾದಿಯ ವಚನಕ್ಕೆ ಲಭಿಸುವುದು ಒಮ್ಮೆಯೂ ಸಂಭವ್ಯ ವಲ್ಲ.

.......ಕೇವಲ ಪರಮಾತ್ಮನ ಭಯದಿಂದ ವೇದ ವನ್ನು ನಾವು ದೈವಪ್ರೋಕ್ತವೆಂದು ಸ್ವೀಕರಿಸಿ, ಅದರ ಉಪದೇಶ ನಿರ್ದೇಶಗಳಲ್ಲಿ ಕಂಡುಬರುವ ಕುಂದುಕೊರತೆ ಗಳು ಅದರ ಭಾಷ್ಯಕಾರರಿಂದುಂಟಾದ್ದುವೆಂದು ಭಾವಿಸು ವಾಗ,.... ಪವಿತ್ರ ಖುರ್‌ಆನಿಗೆದುರಾಗಿ ಮರ್ಯಾದೆ ಗೆಟ್ಟ ರೀತಿಯ ದೋಷಾರೋಪಣೆಗಳನ್ನು ಮಾಡುವುದು ನ್ಯಾಯವೋ?...ಹಾಗೆಯೇ ರಾಜ್ಯದಲ್ಲೆಲ್ಲಾ ವಿರೋಧ ಮತ್ತು ವಿದ್ವೇಷದ ಬೀಜ ಬಿತ್ತುವುದೇತಕ್ಕೆ? ಇದರಲ್ಲಿ ಏನಾದರೂ ಒಳಿತುಂಟಾಗುವುದೆಂದು ಆಶಿಸುತ್ತೀರೋ?

* * *

ಪ್ರಿಯ ಜನರೇ, ಮೈತ್ರಿಗೆ ತುಲ್ಯವಾದುದು ಬೇರೊಂದಿಲ್ಲ. ಬನ್ನಿರಿ, ನಾವು ಎರಡು ಪಕ್ಷದವರೂ ಉಭಯ ಸಮ್ಮತದಿಂದ ಒಂದಾಗುವಾ; ಒಂದು ಜನಾಂಗ ವಾಗುವಾ. ಪರಸ್ಪರ ಪ್ರವಾದಿಗಳನ್ನೂ ಮಹಾಪುರು ಷರನ್ನೂ ಮತಗ್ರಂಥಗಳನ್ನೂ ಆಕ್ಷೇಪಿಸುವ ಕಾರಣದಿಂದ ಎಷ್ಟು ಭಿದ್ರತೆಯೂ ಗೊಂದಲವೂ ಉಂಟಾಗುವು ದೆಂದೂ, ರಾಜ್ಯವು ಎಷ್ಟು ನಷ್ಟಗಳನ್ನು ಹೊರಬೇಕಾಗಿ ದೆಂದೂ ನೀವು ಕಾಣುತ್ತಿದ್ದೀರಷ್ಟೇ. ಬನ್ನಿರಿ, ಇನ್ನು ಅನ್ಯೋನ್ಯ ಮತಸಹಿಷ್ಣುತೆಯ ಅನುಗ್ರಹ ಫಲಗಳನ್ನು ಒಮ್ಮೆ ಪರೀಕ್ಷಿಸಿರಿ. ಇದು ಪರಸ್ಪರ ಸಂಧಾನವನ್ನುಂಟು ಮಾಡಲೂ ಮೈತ್ರಿಭಾವವನ್ನು ಹೆಚ್ಚಿಸಲೂ ಉತ್ತಮ ಮಾರ್ಗವಾಗಿದೆ. ಇದಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ಮೈತ್ರಿ ಸ್ಥಾಪಿಸಲು ಯತ್ನಿಸುವುದಾದರೆ, ಒಳಗಡೆ ದುರ್ಗಂಧವೂ ಕೀವೂ ತುಂಬಿರುವ ಕುರುವನ್ನು ಅದರ ಬಾಹ್ಯವಾದ ಶುದ್ಧವನ್ನೂ ಹೊಳಪನ್ನೂ ಕಂಡು ಸಂತೋಷಪಟ್ಟು ಹಾಗೆಯೇ ಬಿಟ್ಟುಬಿಡುವುದಕ್ಕೆ ಸಮಾನವಾಗಿದೆ.

* * *

ಎಲೈ ಮುಸ್ಲಿಮರೇ, ನಿಮಗೂ ಹಿಂದುಗಳಿಗೂ ಮಧ್ಯೆ ಯಥಾರ್ಥ ಹಾಗೂ ಸುಸ್ಥಿರವಾದ ಸೌಹಾರ್ದ ಭಾವನೆಯನ್ನುಂಟುಮಾಡುವುದು ಹೇಗೆ? ಉಭಯ ಪಕ್ಷದವರು ಸಹ ಪರಸ್ಪರ ಕಾಪಟ್ಯದಿಂದ ಕೂಡಿದ ಒಂದು ತಾತ್ಕಾಲಿಕ ಮೈತ್ರಿಯನ್ನುಂಟುಮಾಡಬಹುದು. ಆದರೆ ಯಥಾರ್ಥ ಮೈತ್ರಿಯೆಂದು ಹೇಳಲಾಗುವ ಭಾವೈಕ್ಯ ಉಂಟಾಗುವುದು, ನೀವು ವೇದವನ್ನೂ ಋಷಿಗಳನ್ನೂ ಆತ್ಮಾರ್ಥತೆಯಿಂದ ಬಹುಮಾನಿಸುವುದರಿಂದಲೂ ಹಾಗೆಯೇ ಹಿಂದುಗಳು ಅವರ ಸಂಕುಚಿತ ಮನೋಭಾವ ಗಳನ್ನು ಉಪೇಕ್ಷಿಸಿ ನಮ್ಮ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಮುಸ್ತಫಾರವರ ಸತ್ಯತೆಯನ್ನು ಸಮ್ಮತಿಸುವುದ ರಿಂದಲೂ ಮಾತ್ರವಾಗಿದೆ. ನಿಮ್ಮ ಹಾಗೂ ಹಿಂದುಗಳ ಎಡೆಯಲ್ಲಿ ಯಥಾರ್ಥವಾದ ಐಕ್ಯ ಹಾಗೂ ಸೌಹಾರ್ದ ಉಂಟಾಗಲು ಇದು ಏಕಮಾತ್ರ ಮಾರ್ಗವೆಂದೂ ಹೃದಯ ರೋಗಗಳನ್ನು ಗುಣಪಡಿಸುವ ಒಂದು ರಸಾ ಯನವೆಂದೂ ತಿಳಿಯಿರಿ.

* * *

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾಗಿವೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿ ಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹಿತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿ ಸುವುದು ವಿವೇಕಯುತವಲ್ಲ. ಹಿಂದು ಮತ್ತು ಮುಸ್ಲಿಂ ಈ ರಾಷ್ಟ್ರದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು— ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ—ಈ ರಾಷ್ಟ್ರ ದಿಂದ ಹೊರದಬ್ಬಲು ಆಲೋಚಿಸುವುದಾದರೆ, ಅದು ಅಸಂಭವ ಹಾಗೂ ಭ್ರಮೆ ಮಾತ್ರ ಆಗಿದೆ. ಬದಲಾಗಿ ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಛೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವ ರಲ್ಲಿ ಒಂದು ಸಮುದಾಯಕ್ಕೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯಕ್ಕೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟುಮಾ ಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು.

ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಾಶವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ವೃಕ್ಷಶಾಖೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

ಮಿತ್ರರೇ, ದೈವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ಎಲ್ಲಾ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯದಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ವಿವೇಕಯುತವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಉಪೇಕ್ಷಿಸಿ ಅನುಕಂಪ ಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವನ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ.

ನಿಮಗೆ ಎರಡು ಪಕ್ಷಗಳಿಗೂ ಸಮಾಧಾನವೂ ಶಾಂತಿಯೂ ಅತ್ಯಾವಶ್ಯಕವಾಗಿರುವ ಕಾಲಘಟ್ಟದಲ್ಲೇ ನಾನು ನಿಮ್ಮನ್ನು ಮೈತ್ರಿಗಾಗಿ ಆಮಂತ್ರಿಸುತ್ತಿದ್ದೇನೆ. ಲೋಕದಲ್ಲಿ ಹಲವಿಧ ಆಪತ್ತುಗಳು ಸಂಭವಿಸುತ್ತಿವೆ. ಭೂಕಂಪಗಳೂ ಕ್ಷಾಮಗಳೂ ಉಂಟಾಗುತ್ತಿವೆ. ಪ್ಲೇಗು ನಮ್ಮನ್ನು ಇನ್ನೂ ಬಿಟ್ಟು ಹೋಗಿಲ್ಲ. ಪರಮಾತ್ಮನು ನನಗೆ ತಿಳಿಸಿರುವನು: ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಕುಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲಾ ಭಯಂಕರವಾದ ವಿಪತ್ತುಗಳೂ ನಾಶನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದ ಮನುಷ್ಯರು ದಿಗ್ಭ್ರಾಂತರಾಗಿ ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸುವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ ಭ್ರಾಂತರಾಗುವರು. ಆದುದರಿಂದ ಎಲೈ ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟುಮಾಡಲಿ. ಐಕ್ಯಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯವನ್ನು ತ್ಯಜಿಸಲಿ. ಇಲ್ಲವಾದರೆ ಅನೋನ್ಯ ಶತ್ರುತ್ವದ ಎಲ್ಲಾ ದುಷ್ಫಲಗಳು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು.

—o— o—o—


— ಈಗಾಗಲೇ ಮುದ್ರಣದಿಂದ ಹೊರಬಂದಿದೆ —

# ಮೈತ್ರಿ ಸಂದೇಶ

**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**

ಅನುವಾದಕ: **ಮುಹಮ್ಮದ್ ಯೂಸುಫ್**, B. Com.

ಪುಟಗಳು: 48 ಬೆಲೆ: ಒಂದು ರೂಪಾಯಿ

ಬರೆಯಿರಿ:

**The Editor,**

**"YUGARASHMI" Kannada Quarterly**

**23/1008, Ansari Road, Bunder, MANGALORE–575001.**

# ★ ಇಸ್ಲಾಂ ಪುರೋಗಮನ ಮತ ★

—ಸರ್ ಮುಹಮ್ಮದ್ ಝಫರುಲ್ಲಾ ಖಾನ್

"ಲೋಕದ ಪುರೋಗತಿಗೆ ಸಹಾಯಕವಾಗಿರುವ ಮತಕ್ಕೆ ಮಾತ್ರವೇ ಆಧುನಿಕ ಕಾಲದಲ್ಲಿ ನೆಲೆನಿಲ್ಲಲಿಕ್ಕೂ ನಾಶವನ್ನು ಜಯಿಸಲಿಕ್ಕೂ ಸಾಧ್ಯ"ವೆಂಬುದು ಮುಂದುವರಿದ ಕೆಲವು ಪಾಶ್ಚಾತ್ಯ ಚಿಂತಕರ ಅಭಿಪ್ರಾಯ. ಪಾಶ್ಚಾತ್ಯ ಚಿಂತಕರ ಈ ಅಭಿಪ್ರಾಯದ ಮಾನದಂಡದೊಂದಿಗೆ ಲೋಕದಲ್ಲಿರುವ ಮತಗಳನ್ನು ನಾವು ಪರೀಕ್ಷಿಸಿದಲ್ಲಿ, ಇತರ ಮತಗಳಲ್ಲಿ ಏನೆಲ್ಲಾ ಮೇಲ್ಮೆಗಳನ್ನೂ ಔನ್ನತ್ಯಗಳನ್ನೂ ಕಾಣಬಹುದಾದರೂ ಆಧುನಿಕ ಲೋಕದ ಪುರೋಗಮನದೊಂದಿಗೆ ಸಹಕರಿಸುವ ಸಾಮರ್ಥ್ಯವು ಇಸ್ಲಾಂ ಮತಕ್ಕೆ ಮಾತ್ರವೇ ಇರುವುದೆಂದು ಸಮ್ಮತಿಸಲು ನಿರ್ಬಂಧಿತರಾಗುತ್ತೇವೆ.

ಇಸ್ಲಾಮಿನ ಈ ವಿಶಿಷ್ಟತೆಯಲ್ಲಿ ಪ್ರಭಾವಿತನಾಗಿಯೇ ಇಂಗ್ಲೆಂಡಿನ ಪ್ರಸಿದ್ಧ ತತ್ವ ಚಿಂತಕನಾದ ಬರ್ನಾಡ್ ಷಾ ಈ ರೀತಿ ಹೇಳಿರುವರು: "ಮತಗಳ ಕಾಲವು ಕಳೆಯುತ್ತಲಿದೆ. ಲೋಕದ ಪುರೋಗತಿಯೊಂದಿಗೆ ಸಹಕರಿಸಿ ಕಳೆಯಲು ಸಾಧ್ಯವಿರುವ ಮತಕ್ಕೆ ಮಾತ್ರವೇ ಉಳಿದಿರಲು ಅರ್ಹತೆಯಿದೆ. ಈ ವಿಶೇಷ ಗುಣವು ಇಸ್ಲಾಮಿನಲ್ಲಲ್ಲದೆ ಬೇರೆ ಯಾವ ಮತದಲ್ಲೂ ನನಗೆ ಕಾಣುವುದಿಲ್ಲ. ಆದುದರಿಂದ ಭಾವೀ ಕಾಲದಲ್ಲಿ ಎಲ್ಲಾ ಮತಗಳೂ ಲೋಕದಿಂದ ಕಣ್ಮರೆಯಾದರೆ, ಅಥವಾ ಇಸ್ಲಾಂ ಮಾತ್ರವೇ ಲೋಕದ ಒಂದೇ ಒಂದು ಮತವಾಗಿ ಬಾಕಿಯುಳಿದರೆ ಅದರಲ್ಲಿ ಆಶ್ಚರ್ಯ ಪಡಬೇಕಾದುದೇನೂ ಇರುವುದಿಲ್ಲ". ಮತ ಕಾರ್ಯಗಳಲ್ಲಿ ಮಾತ್ರವಲ್ಲ ಲೌಕಿಕ ವ್ಯವಹಾರಗಳಲ್ಲೂ ಕೂಡಾ ಮನುಷ್ಯನಿಗೆ ಆವಶ್ಯಕವಾದ ಉತ್ತಮ ಮಾರ್ಗದರ್ಶನವನ್ನು ತೋರಿಸುತ್ತದೆಯೆಂಬುದು ಇಸ್ಲಾಮಿನ ಒಂದು ವಿಶೇಷತೆಯಾಗಿದೆ. ಐಹಿಕ ಜೀವಿತದಲ್ಲಿ ಶ್ರದ್ಧಾಳುಗಳಾಗಿರಲು ಆಜ್ಞಾಪಿಸುವುದರೊಂದಿಗೇನೇ ಈ ಲೋಕವನ್ನು ಪಾರತ್ರಿಕದ ಒಂದು ಕೃಷಿ ಸ್ಥಳವನ್ನಾಗಿ ಇಸ್ಲಾಂ ವರ್ಣಿಸಿದೆ. ರಾಜ್ಯಾಡಳಿತ ಮೊದಲ್ಗೊಂಡು ಕುಟುಂಬ ಸಂಬಂಧದವರೆಗಿರುವ ಎಲ್ಲಾ ಕಾರ್ಯಗಳಲ್ಲೂ ಅದು ಮನುಷ್ಯ ಕುಲಕ್ಕೆ ಒಂದು ಉತ್ತಮ ಮಾರ್ಗದರ್ಶನವನ್ನು ಈಯುತ್ತದೆ. ಪಾರಮಾರ್ಥಿಕ ಜೀವಿತವನ್ನು ಸುಭದ್ರವಾಗಿರಿಸಲು ಎಚ್ಚರಿಸುವುದರೊಂದಿಗೇನೇ ಭೌತಿಕ ಜೀವನವನ್ನು ಶ್ರೇಯಸ್ಕರವಾಗಿರಿಸಲಿಕ್ಕೂ ಅದು ಆಹ್ವಾನಿಸುತ್ತದೆ. ಹೀಗೆ ಇಸ್ಲಾಂ ಮತವು ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಗೆ ಉತ್ಕೃಷ್ಟವಾದ ಮಾರ್ಗವೂ ಅದೇ ವೇಳೆಯಲ್ಲಿ ಉತ್ತಮವಾದ ಒಂದು ಜೀವಿತ ಕ್ರಮವೂ ಆಗಿದೆ.

ಇಸ್ಲಾಂ ಮತ್ತು ಅದರ ಮೊದಲು ಆವಿರ್ಭವಿಸಿದ ಇತರ ಮತಗಳೂ ತಮ್ಮೊಳಗಿರುವ ಒಂದು ವ್ಯಕ್ತವಾದ ವ್ಯತ್ಯಾಸವು, ಪೂರ್ವ ಮತಗಳು ಐಹಿಕ ನಿಷೇಧವನ್ನು ಪ್ರಬೋಧಿಸಿತು ಎಂಬುದಾಗಿದೆ. ಅವುಗಳೆಲ್ಲವೂ ಮನುಷ್ಯರಿಗೆ ಸರ್ವ ಸಂಗ ಪರಿತ್ಯಾಗದ ಮತ್ತು ಸನ್ಯಾಸದ ಪ್ರಭೋದನೆಯನ್ನೇ ನೀಡಿದೆ. ಆದರೆ, ಇಸ್ಲಾಂ ಮತವು ಸನ್ಯಾಸವನ್ನು ವಿರೋಧಿಸುತ್ತದೆ. ಮಾತ್ರವಲ್ಲ ಭೌತಿಕ ಸಂಪತ್ತುಗಳ ಸಂಪೂರ್ಣವಾದ ಪ್ರಯೋಜನವನ್ನು ಪಡೆಯಲು ಅದು ಉಪದೇಶಿಸುತ್ತದೆ. ಸನ್ಯಾಸವನ್ನು ಇಸ್ಲಾಂ ಇಷ್ಟಪಡುವುದಿಲ್ಲ. ಬದಲಾಗಿ ಮನುಷ್ಯನಲ್ಲಿ ಕರ್ಮೋತ್ಸಾಹವನ್ನು ಬೆಳೆಸಿ ಅವನನ್ನು ಲೋಕಕ್ಕೂ ಮಾನವ ಕುಲಕ್ಕೂ ಪ್ರಯೋಜನಕಾರಿಯಾದ ವ್ಯಕ್ತಿಯನ್ನಾಗಿ ಮಾರ್ಪಡಿಸಲು ಅದು ಹವಣಿಸಿದೆ. ಮನುಷ್ಯರಲ್ಲಿ ಅಂತರ್ಲೀನವಾಗಿರುವ ನಿಸರ್ಗ ಶಕ್ತಿಗಳನ್ನು ಉತ್ತೇಜನಗೊಳಿಸಲು ಸಾಧ್ಯವಿರುವ ಮತ ಮಾತ್ರವೇ ಲೋಕದ ಅಭಿವೃದ್ಧಿಗೆ ಸಹಾಯಕವಾಗಿರುವುದು.

ಇಸ್ಲಾಂ ಮತವು ವಿಶ್ವಾಸಿಗಳನ್ನೂ ಅವಿಶ್ವಾಸಿಗಳನ್ನೂ ಪರಸ್ಪರ ಸಂಘಟಿಸಿ ಇಡೀ ಜಗತ್ತನ್ನೇ ಒಂದು ಕುಟುಂಬವೂ ಭ್ರಾತೃ ಸಮೂಹವೂ ಆಗಿರಿಸಲು ಪ್ರಯತ್ನಿಸಿದೆ. ಇತರ ಮತಗಳ ಆಚಾರ್ಯರನ್ನು ಆದರಿಸಲು

ಇಸ್ಲಾಂ ಮತವು ಅದರ ಅನುಯಾಯಿಗಳೊಡನೆ ಆಜ್ಞಾಪಿಸಿರುತ್ತದೆ. ಹೀಗೆ ಸಾವಿರಾರು ವರ್ಷಗಳಿಂದ ನೆಲೆನಿಂತಿದ್ದ ಎಲ್ಲಾ ವಿಧದ ಭಿನ್ನತೆಗಳನ್ನೂ ಸ್ಪರ್ಧೆಗಳನ್ನೂ ಕಲಹಗಳನ್ನೂ ಕೊನೆಗೊಳಿಸುವ ಒಂದು ಮಾರ್ಗವನ್ನು ಇಸ್ಲಾಂ ತೆರೆದು ತೋರಿಸಿದೆ. ಮತ, ವರ್ಣ, ವರ್ಗ ಇತ್ಯಾದಿಗಳ ಮೇಲಿನ ವ್ಯತ್ಯಾಸಗಳನ್ನು ಕೊನೆಗಾಣಿಸಿ, ಮಾನವೀಯ ಸಹೋದರತೆಯನ್ನೂ ಸಹಿಷ್ಣುತೆಯನ್ನೂ ವರ್ಧಿಸಲು ಆಧುನಿಕ ಪುರೋಗಮನ ಲೋಕವು ಶ್ರಮಿಸುತ್ತಿದೆಯಷ್ಟೆ. ಸಹೋದರತೆಯ ಮತ್ತು ಸಹಿಷ್ಣುತೆಯ ಅತ್ಯಂತ ದೊಡ್ಡ ಮಿತ್ರ ಶಕ್ತಿಯಾಗಿದೆ ಇಸ್ಲಾಂ. ಪರಿಷ್ಕೃತ ಲೋಕಕ್ಕೆ ಅತ್ಯಂತ ಯೋಗ್ಯ ಮತವು ಇಸ್ಲಾಂ ಆಗಿದೆ ಎಂದು ಹೇಳುವುದು ಇದೇ ಕಾರಣದಿಂದಾಗಿದೆ.

ಧಾರ್ಮಿಕ ಆರಾಧನೆಗಳನ್ನೂ ಅನುಷ್ಠಾನಗಳನ್ನೂ ಪ್ರೇರೇಪಿಸಿ ಅದರ ಕ್ರಮಗಳನ್ನು ವಿವರಿಸಿ ಕೊಡುವುದು ಮಾತ್ರ ಧರ್ಮಗಳ ಉದ್ದೇಶವಲ್ಲವೆಂದೂ, ಮನುಷ್ಯರ ಮುಂದೆ ಒಂದು ಸಂಪೂರ್ಣವಾದ ಜೀವನ ಪದ್ಧತಿಯನ್ನು ಸಮರ್ಪಿಸುವುದು ಕೂಡಾ ಅದರ ಉದ್ದೇಶವಾಗಿರಬೇಕೆಂದೂ ಲೋಕವು ಇಂದು ಮನಗಂಡಿದೆ. ಅಂತಿಮವೂ ಪರಿಪೂರ್ಣವೂ ಆದ ಮತವೆಂಬ ವಾದದೊಂದಿಗೆ ಆವಿರ್ಭವಿಸಿದ ಇಸ್ಲಾಂ ಮತವು ಮತಗಳ ಈ ಉದ್ದೇಶವನ್ನೂ ಆದರ್ಶವನ್ನೂ ಮುಂದಿರಿಸಿಕೊಂಡೇ ಮನುಷ್ಯರಿಗೆ ಮಾರ್ಗದರ್ಶನವಿತ್ತಿದೆ. ಈ ಉದ್ದೇಶಾದರ್ಶಗಳ ತಳಹದಿಯಲ್ಲಿ ಇಸ್ಲಾಂ ಸಮುದಾಯದ ಆಂತರಿಕ ವ್ಯವಹಾರಗಳು ಪರಿಶೋಧಿಸಲ್ಪಡಲೂ ಬಹುದು. ಆದರೆ, ರಾಷ್ಟ್ರಾಂತ ವ್ಯವಹಾರದ ನೀತಿಯ ಮೇಲೆ ಶೋಧನೆ ನಡೆಸುವುದು ಹೆಚ್ಚು ಪ್ರಯೋಜಕರವಾಗಿರಬಹುದು.

ಕಳೆದ ಎರಡು ಲೋಕ ಮಹಾಯುದ್ಧಗಳ ದುರಂತ ಫಲಗಳು ಮಾನವ ಕುಲಕ್ಕೆ ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆಯು ಲೋಕ ಸಮಾಧಾನವೇ ಆಗಿದೆಯೆಂದು ವ್ಯಕ್ತಪಡಿಸಿದೆ. ಆದರೆ, ರಾಷ್ಟ್ರಗಳೆಡೆಯಲ್ಲಿರುವ ತಪ್ಪಭಿಪ್ರಾಯಗಳನ್ನೂ ಪೈಪೋಟಿಗಳನ್ನೂ ದೂರೀಕರಿಸದ ಹೊರತು ಲೋಕ ಸಮಾಧಾನವು ಅಸಾಧ್ಯ. ರಾಷ್ಟ್ರಗಳು ಮತಪರವೂ ವರ್ಗೀಯವೂ ಆದ ಸ್ಪರ್ಧೆಗಳನ್ನು ನಿಲ್ಲಿಸಬೇಕಾದುದು ಅತೀ ಅಗತ್ಯವೆಂದೂ, ಒಂದು ರಾಷ್ಟ್ರವು ಇತರ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಕೈಹಾಕಬಾರದೆಂದೂ, ಅವಿಕಸಿತ ರಾಷ್ಟ್ರಗಳನ್ನು ಅಭಿವೃದ್ಧಿಗೊಳಿಸಲು ಎಲ್ಲಾ ಸಹಾಯವನ್ನು ಮಾಡಬೇಕೆಂದೂ ಅಂತಾರಾಷ್ಟ್ರೀಯ ವೇದಿಕೆಗಳಿಂದ ಆಹ್ವಾನಗಳು ನಿರಂತರವಾಗಿ ಮೊಳಗುತ್ತಲಿವೆ. ಈ ವಿಷಯವು ಮನುಷ್ಯ ಸಮುದಾಯದಲ್ಲಿ ತೀರಾ ಹೊಸದಾಗಿ ಉದ್ಭವಿಸಿದ ಪ್ರಶ್ನೆಯಾಗಿರುವುದರಿಂದ ಇಸ್ಲಾಮಿನ ರಾಷ್ಟ್ರಾಂತರ ಪ್ರವರ್ತನಗಳು ಈ ಅಳತೆಗೋಲಿನಿಂದ ಪರೀಕ್ಷಿಸಲ್ಪಡಬಹುದು. ಹದಿನಾಲ್ಕು ಶತ ವರ್ಷಗಳಿಗೆ ಮೊದಲೇ ಇಸ್ಲಾಂ ಶಾಂತಿ ಮತ್ತು ಸಂರಕ್ಷಣೆಯ ಪತಾಕೆಯನ್ನು ಎತ್ತಿಹಿಡಿದು ಜಾಗತಿಕ ಶಾಂತಿಯನ್ನು ಸ್ಥಾಪಿಸಲಿಕ್ಕೂ ಅದನ್ನು ಕಾಪಾಡಲಿಕ್ಕೂ ಇಂದಿನ ಪರಿಷ್ಕೃತ ಲೋಕವು ಸೂಚಿಸುತ್ತಿರುವ ಅದೇ ಸುಚಿಂತಿತ ಮಾರ್ಗವನ್ನು ನಿರ್ದೇಶಿಸಿತು ಎಂಬುದು ಆಶ್ಚರ್ಯಕರವಾಗಿದೆ.

ಜಗತ್ತಿನಲ್ಲಿರುವ ಎಲ್ಲಾ ಮತಗಳನ್ನೂ ಸತ್ಯಪಡಿಸಿ, ಎಲ್ಲಾ ಮತಾಚಾರ್ಯರನ್ನೂ ಆದರಿಸಬೇಕಾದುದು ಅವಶ್ಯಕವೆಂದು ಆಜ್ಞಾಪಿಸುವ ಒಂದೇ ಒಂದು ಮತವು ಇಸ್ಲಾಂ ಮತವಾಗಿರುವುದೆಂದು ಸತ್ಯಸಂಧರೂ ನಿಷ್ಪಕ್ಷಮತಿಗಳೂ ಆದ ಎಲ್ಲಾ ಪಾಶ್ಚಾತ್ಯ ಬರಹಗಾರರೂ ಸಮ್ಮತಿಸಿರುವರು. ಯಹೂದ್ಯರ ಮತ್ತು ಕ್ರೈಸ್ತರೆಡೆಯಲ್ಲಿ ಶತಮಾನಗಳಿಂದಲೂ ಬೇರೂರಿದ್ದ ಮತಸ್ಪರ್ಧೆಯನ್ನು ಕೊನೆಗಾಣಿಸಿದುದು ಇಸ್ಲಾಂ ಆಗಿದೆ. ಇಸ್ಲಾಂ ಪೂರ್ವ ಮತಗಳನ್ನು ಸತ್ಯಪಡಿಸಿದುದು ಮಾತ್ರವಲ್ಲ, ಆ ಮತಗಳ ಅನುಯಾಯಿಗಳಿಗೆ ಅವರವರ ಮತಗಳನ್ನು ಅನುಷ್ಠಿಸಲು ಸಂಪೂರ್ಣ ಸ್ವಾತಂತ್ರ್ಯವನ್ನಿತ್ತು, ಇಸ್ಲಾಮಿಕ ರಾಷ್ಟ್ರಗಳಲ್ಲಿ ಮತಸ್ವಾತಂತ್ರ್ಯಕ್ಕಿರುವ ಸಂರಕ್ಷಣಾ ಭರವಸೆಯನ್ನು ನೀಡುತ್ತಾ ಈ ಮತಗಳು ನೆಲೆಸಿರಲಿಕ್ಕೂ ಅಭಿವೃದ್ಧಿ ಹೊಂದಲಿಕ್ಕೂ ಬೇಕಾದ ಸಂದರ್ಭಗಳನ್ನು ಸೃಷ್ಟಿಸಿ ಕೊಟ್ಟಿತು.

ಇತರ ಜನತೆಯ ಆಂತರಿಕ ಕಾರ್ಯಗಳಲ್ಲಿ ಕೈಹಾಕುವ ವಿಷಯದ ಕುರಿತಾದರೆ, ಇಸ್ಲಾಂ ಜಯಿಸಿಕೊಂಡ ಪ್ರದೇಶಗಳಲ್ಲಿ ಒಮ್ಮೆಯಾದರೂ ಅಂತಹ ಅಪಾದನೆಗಳಿಗೆ ಸಂದರ್ಭಗಳುಂಟಾಗಿರಲಿಲ್ಲ. ಭಾರತದಲ್ಲಿ ಮೊದಲ ಮುಸ್ಲಿಂ ರಾಜ್ಯಾಡಳಿತವು ಸ್ಥಾಪಿತವಾದುದು ಸಿಂಧಿನಲ್ಲಾಗಿತ್ತು. ಅಲ್ಲಿರುವ ಹಿಂದುಗಳ ಸಾಮೂಹಿಕವೂ ಮತಪರವೂ ಆದ ಕಾರ್ಯಗಳಿಂದ ಮುಸ್ಲಿಂ ರಾಜ್ಯಕಾರಣಿಗಳು ಸಂಪೂರ್ಣ ದೂರವಾಗಿದ್ದರಲ್ಲದೆ, ಆಡಳಿತ ಕಾರ್ಯಗಳಲ್ಲಿ ಅಧಿಕವನ್ನೂ ಅವರಿಗೇ ಒಪ್ಪಿಸಿಕೊಟ್ಟಿದ್ದರು. ನಂತರ ಭಾರತದಲ್ಲಿ ಸುಶಕ್ತವಾದ ಒಂದು ಮುಸ್ಲಿಂ ಸಾಮ್ರಾಜ್ಯವು ಸ್ಥಾಪಿತವಾದ ನಂತರವೂ

ಹಿಂದುಗಳ ಸಾಮೂಹಿಕವಾದ ಕಾರ್ಯಗಳಲ್ಲಿ ಅವರು ಯಾವರೀತಿಯ ಹಸ್ತಕ್ಷೇಪವನ್ನೂ ನಡೆಸಿರಲಿಲ್ಲ. ಉತ್ತರಾಫ್ರಿಕದಲ್ಲೂ ಏಷ್ಯಾದ ಇತರ ಭಾಗಗಳಲ್ಲೂ ಅಸ್ತಿತ್ವಕ್ಕೆ ಬಂದ ಮುಸ್ಲಿಂ ರಾಜ್ಯಾಡಳಿತದ ಚರಿತ್ರೆಯು ವ್ಯಕ್ತಪಡಿಸುವುದೇನೆಂದರೆ, ಅಲ್ಲಿನ ಕ್ರೈಸ್ತರ ಮತ್ತು ಯೆಹೂದ್ಯರ ಸಾಮೂಹಿಕ ವ್ಯವಸ್ಥೆಗಳು ನಿರ್ಭಾದಿತವಾಗಿ ನೆಲೆನಿಂತಿವೆಯೆಂದೂ, ರಾಷ್ಟ್ರದ ಐಕ್ಯವನ್ನೂ ಸಾರ್ವಜನಿಕ ಕ್ಷೇಮವನ್ನೂ ಬಾಧಿಸುವ ಕಾರ್ಯಗಳ ಹೊರತು ಆ ಸಮುದಾಯಗಳ ಆಂತರಿಕವಾದ ಯಾವುದೇ ಪ್ರವರ್ತನೆಗಳಲ್ಲೂ ಅವರು ಹಸ್ತಕ್ಷೇಪ ನಡೆಸಿರಲಿಲ್ಲವೆಂದೂ ಆಗಿದೆ. ಅವರೆಲ್ಲರೂ ಒಂದು ವಿಧದಲ್ಲಿ ಸ್ವಯಂ ನಿರ್ಣಯಾಧಿಕಾರವುಳ್ಳ ಸ್ವತಂತ್ರ ಪ್ರಜೆಗಳಾಗಿದ್ದರು.

ಇಸ್ಲಾಮಿನ ಆವಿರ್ಭಾವದ ಕಾಲದಲ್ಲಿ, ಇಂದು ನಮ್ಮೆದುರಿರುವಂತಹ ಸಾಂಪತ್ತಿಕವೂ ಉದ್ಯೋಗ ಸಂಬಂಧವೂ ಆದ ಪ್ರಶ್ನೆಗಳು ತಲೆಯೆತ್ತಿರಲಿಲ್ಲ. ಆದುದರಿಂದ ಇತರ ಜಾತಿಗಳ ಸಾಂಪತ್ತಿಕವೂ ಉದ್ಯೋಗ ಸಂಬಂಧವೂ ಆದ ಅಭಿವೃದ್ಧಿಗಾಗಿ ಇಂದು ನೀಡಲ್ಪಡುತ್ತಿರುವಂತಹ ಸಹಾಯಗಳನ್ನು ಮುಸ್ಲಿಂ ರಾಜ್ಯಾಡಳಿತವೂ ನೀಡಿವೆಯೆಂಬುದನ್ನು ಉದಾಹರಣೆ ಸಹಿತ ನಿರೂಪಿಸಲು ಸಾಧ್ಯವಿಲ್ಲ. ಆದರೆ ಮುಸ್ಲಿಮರು ಅವರ ಔನ್ನತ್ಯದ ಕಾಲದಲ್ಲಿ ಲೋಕಕ್ಕೆ ಸಂಭಾವನೆಯಿತ್ತ ಅಭಿವೃದ್ಧಿ ಯೋಜನೆಗಳನ್ನು ತಮಗೆ ಮಾತ್ರವಾಗಿ ಪರಿಮಿತಗೊಳಿಸಿರಲಿಲ್ಲವೆಂದೂ ಅವರ ವಿದ್ಯಾಲಯಗಳೂ, ಗ್ರಂಥಾಲಯಗಳೂ, ಕಲಾನಿಲಯಗಳೂ ಸಕಲಜನ ವಿಭಾಗಗಳಿಗೂ ತೆರೆದಿರಿಸಲ್ಪಟ್ಟಿದ್ದವೆದೂ ಎಲ್ಲಾ ಐರೋಪ್ಯ ಚರಿತ್ರಕಾರರೂ ಸಮ್ಮತಿಸಿರುವರು. ಆದುದರಿಂದ ಮುಸ್ಲಿಮರ ಅಭಿವೃದ್ಧಿಯ ಕಾಲದಲ್ಲಿ ಇಂದು ನಮ್ಮ ಮುಂದಿರುವಂತಹ ಸಾಂಪತ್ತಿಕ ವಿಕಸನ ಯೋಜನೆಗಳು ರೂಢವಾಗಿರುತ್ತಿದ್ದರೆ ಅವುಗಳನ್ನು ಯಥೋಚಿತಗೊಳಿಸುವ ಕಾರ್ಯದಲ್ಲೂ ಅವರು ಎಂದಿಗೂ ಹಿಂದುಳಿಯುತ್ತಿರಲಿಲ್ಲವೆಂದು ಗ್ರಹಿಸಬಹುದು.

ಈರೀತಿ ಕಳೆದ ಹದಿನಾಲ್ಕು ಶತಮಾನಗಳಿಂದಲೂ ಮನುಷ್ಯರಾಶಿಗೆ ಉತ್ತಮವಾದ ಮಾರ್ಗದರ್ಶನವನ್ನು ನೀಡುತ್ತಾಬಂದ ಇಸ್ಲಾಂ ಇನ್ನುಮುಂದೆಯೂ ಮನುಷ್ಯ ಸಮುದಾಯಕ್ಕೆ ಸನ್ಮಾರ್ಗವನ್ನು ತೋರಿಸಲು ಪರ್ಯಾಪ್ತವಾಗಿರುವುದೆಂದು ಇದರಿಂದ ತಿಳಿದುಕೊಳ್ಳಬಹುದು.

(ಕನ್ನಡಕ್ಕೆ: ಎಂ. ಪಿ. ಇಬ್ರಾಹಿಂ)


BICHKO SUITCASE WORKS

Manufacturers of different varieties of suitcases

MANAR BUILDING,

CALICUT-673010.

Enquiries solicited.

Phone: 74464 P. P.

ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು

KESSEE TRADING CORPORATION

Dealers in: TOPIOCA CHIPS AND FLOUR

9/135, GUNNY STREET, CALICUT-673001.

ಈ "ಇವರು"
ಅಂದು—
ಆ ದಿವ್ಯ ಪುರುಷನ
ಉಪದೇಶವನ್ನು ಕೇಳಿ
ಕಿವಿ ನಿಮಿರಿಸಿ ಕೊಂಡು,
ಭವಿಷ್ಯವನ್ನು ಕೇಳಿ,
ಕತ್ತು ತಿರುಗಿಸಿಕೊಂಡು,
ಇತ್ತ ಬಂದು—
ಹೇಳಿದ್ದು ಆಗಲಿ, ಆದಾಗ
ಮತ್ತೆ ನೋಡುವ, ಎಂದೂ ಹೇಳಿ
......................
........ಕಾಲ ಚಕ್ರ ಉರುಳಿ
ಉರುಳಿ,
ಅವರ ಸಮೀಪ ಬಂದು
ನಿಂತಾಗ,
ಭವಿಷ್ಯ ತನ್ನ ಸ್ಥಾನ
ಗಿಟ್ಟಿಸಿಕೊಂಡಾಗ,
ಅದೇ "ಇವರು"
ಕಣ್ಣು ಹಚ್ಚಿಕೊಂಡಂತೆ,
ಕಿವಿ ಮುಚ್ಚಿಕೊಂಡಂತೆ,
ನಡೆಯುವುದೆಲ್ಲವನ್ನೂ ದಿಟ್ಟಿಸಿ,
ಕೇಳಿ, ಅನುಭವಿಸಿ

ತನಗೇ
ತನ್ನ ಅಸ್ತಿತ್ವದ
ಬಗೆಯಲ್ಲಿ ಅರಿವಿಲ್ಲದಂತೆ
ಎತ್ತೆತ್ತಲೋ, ಎಲ್ಲೆಲ್ಲಿಗೋ
ನೋಡಿ,
ಆದದ್ದೂ,
ನೋಡಿದ್ದೂ,
ಕೇಳಿದ್ದೂ
ಅನುಭವಿಸಿದ್ದೂ
—ಎಲ್ಲವೂ ಬರೀ "ಭ್ರಮೆ"
ಎಂದು—
ತನ್ನಾಕ್ಷಿಗೇ ಮಣ್ಣೆ ರಚಿ
ತನ್ನ ಹೃದಯವನ್ನೇ ಕಲ್ಲಾಗಿಸಿ,
ವಿಶ್ವಾಸತನಕ್ಕೇ ದ್ರೋಹ ಬಗೆದು,
"ಅವಿಶ್ವಾಸಿ"ಗಳಾಗಿ,
—ಅದೂ ಅಲ್ಲ – ಎಂದು
ಹೇಳಿ ಬಿಟ್ಟು ಇನ್ನೂ ಏನೇ
ನೋ ಮಾಡಿ,
—ಆ "ಇವರು"

—ಶಯ್ಯಿಬಹ್ಮದ್ರಶೀದ್

# ಲಂಡನ್ ಮಸೀದಿಯಲ್ಲಿ ಪೈಗಂಬರರ ದಿನಾಚರಣೆ

1975ನೇ ಎಪ್ರಿಲ್ 13ನೇ ದಿನಾಂಕದಂದು ಲಂಡನ್ ಮಸೀದಿಯಲ್ಲಿ ಪೈಗಂಬರರ ದಿನವನ್ನು ಆಚರಿಸಲಾಯಿತು. ಲಂಡನಿನಲ್ಲಿರುವ ಗಾಂಬಿಯಾ ಹೈ ಕಮಿಷನರ್ ಅಲ್‌ಹಾಜ್ ಅಬೂಬಕ್ಕರ್ ಉಸ್ಮಾನ್ ಜೇನಾ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ವಿವಿಧ ವಿಭಾಗದ ಪ್ರಮುಖರು ಪೈಗಂಬರರನ್ನು ಹೊಗಳಿ ಭಾಷಣ ಮಾಡಿದರು.

ವಾಂಡ್ಸ್‌ವರ್ತ್‌ನ ಮೇಯರ್ ಎ. ಜೆ. ಹಿಲ್ ಮಾತನಾಡುತ್ತಾ, ಆಧುನಿಕ ಲೋಕವು ಮುಹಮ್ಮದ್ ಪೈಗಂಬರರ ಅಧ್ಯಾಪನೆಗಳನ್ನು ಅನುಷ್ಠಿಸಲು ಪ್ರಯತ್ನಿಸುವುದಾದರೆ ಅನೇಕ ವಿಷಮ ಪ್ರಶ್ನೆಗಳಿಗೆ ಪರಿಹಾರವನ್ನು ಕಾಣಲು ಸಾಧ್ಯವಾಗಬಹುದೆಂದು ಹೇಳಿದರು. ಪಾರ್ಲಿಮೆಂಟ್ ಮೆಂಬರ್ ಮಿ| ಜಾಂ ಕೋಕ್ಸ್, ವರ್ಲ್ಡ್ ಕಾಂಗ್ರೆಸ್ ಓಫ್ ಫೈತ್ಸ್ ಪ್ರತಿನಿಧಿ ಸರ್‌ದಾರ್ ಹರಿಮಂದಿರ್‌ಸಿಂಗ್, ಓರ್ವ ಯಹೂದ್ಯ ಮತಪಂಡಿತನಾದ ಕ್ಲಿಫೋರ್ಡ್ ಕೋಹನ್ ಮೊದಲಾದವರು ಭಾಷಣ ಮಾಡಿದರು. ಸರ್ ಝಫರುಲ್ಲಾ ಖಾನ್ ಅವರು ಪೈಗಂಬರರ ಜೀವನ ಸಂಭವಗಳನ್ನು ಹೃದಯಸ್ಪರ್ಶಿಯಾಗಿ ವಿವರಿಸಿದರು.

ಗಾಂಬಿಯಾದ ಹೈ ಕಮಿಷನರ್ ಅಲ್‌ಹಾಜ್ ಅಬೂಬಕ್ಕರ್ ಉಸ್ಮಾನ್ ಮಾಡಿದ ಭಾಷಣದಲ್ಲಿ ತನ್ನ ಹಜ್ ತೀರ್ಥಾಟನೆಯ ಅನುಭವಗಳನ್ನು ವಿವರಿಸಿದರು. ತಾನು ಹಜ್ ಕರ್ಮವನ್ನು ಅನುಷ್ಠಿಸಲು ಉದ್ದೇಶಿಸಿ ಲಂಡನ್ ಮಸೀದಿಯ ಇಮಾಂ ಬಶೀರ್ ಅಹ್ಮದ್ ರಫೀಕ್‌ರವರನ್ನು ಸಮೀಪಿಸಿದಾಗ ಅವರು ನೀಡಿದ ಗ್ರಂಥಗಳೊಂದಿಗೆ ಹಜ್ ಕರ್ಮದ ಕುರಿತು ಝಫರುಲ್ಲಾ ಖಾನ್ ಸಾಹೇಬರು ಬರೆದ ಒಂದು ಪುಸ್ತಕ ಸಹ ಲಭಿಸಿತ್ತೆಂದೂ ಅದು ಓದಿದಾಗ ಹಜ್ ಕರ್ಮದ ಸರಿಯಾದ ತತ್ವ ಶಾಸ್ತ್ರವನ್ನು ತನಗೆ ಮನಮುಟ್ಟುವಂತೆ ತಿಳಿಯುವರೆ ಸಾಧ್ಯವಾಯಿತೆಂದೂ ಹೇಳಿದರು.

ಮಸೀದಿಯ ಇಮಾಂ ಬಶೀರ್ ಅಹ್ಮದ್ ರಫೀಕ್ ಅವರು ಸ್ವಾಗತ ಭಾಷಣವನ್ನೂ ವಂದನಾರ್ಪಣೆಯನ್ನೂ ಮಾಡಿದರು.

---

### ಅಹ್ಮದಿಯಾ ಸಂಘಟನೆಯು ಜಯಿಸುವುದೆಂದು.

# ಮೊರಿಷ್ಯಸ್ ಪ್ರಧಾನ ಮಂತ್ರಿ ರಾಂ ಗುಲಾಮ್

ಅಹ್ಮದಿಯಾ ಸಂಘಟನೆಯು ಜನರೆಡೆಯಲ್ಲಿ ತುಂಬಾ ಗೌರವವನ್ನೂ ಅನುಭಾವವನ್ನೂ ಪಡೆದಿದೆಯೆಂದೂ, ಈ ಸಂಘಟನೆಯು ಸರ್ವತ್ರ ಜಯಿಸಿ ಕಾಣಲು ತಾನು ಇಚ್ಛಿಸುತ್ತೇನೆಂದೂ ಮೊರಿಷ್ಯಸ್ ಅಹ್ಮದಿಯಾ ಮಿಷ್ಯನಿನ ವತಿಯಿಂದ ರೋಸ್‌ಹಿಲ್‌ನಲ್ಲಿ ಸೇರಿದ ಪೈಗಂಬರರ ದಿನಾಚರಣೆಯ ಬೃಹತ್ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ, ಮೊರಿಷ್ಯಸ್ ಪ್ರಧಾನ ಮಂತ್ರಿ ರಾಂ ಗುಲಾಮ್ ಹೇಳಿದರು.

ವಿವಿಧ ಮತಸ್ಥರೆಡೆಯಲ್ಲಿ ಮೈತ್ರಿಯನ್ನೂ ಸೌಹಾರ್ದತೆಯನ್ನೂ ಸೌಭ್ರಾತೃತ್ವವನ್ನೂ ಸೃಷ್ಟಿಸಲಿಕ್ಕೆ ಅಹ್ಮದಿಯಾ ಸಂಘಟನೆಯು ಮಾಡುವ ಶ್ರಮವನ್ನು ಅವರು ಹೊಗಳಿದರು.

ತಾಂಜಾನಿಯಾ ಸಂದರ್ಶಿಸಿದಾಗ ಅಲ್ಲಿಯ ನೀತಿನ್ಯಾಯ ಮಂತ್ರಿಯಾಗಿದ್ದ ದಿವಂಗತ ಮೌಲಾನಾ ಅಂರೀ ಉಬೈದಿ*ಯವರನ್ನು ತಾನು ಭೇಟಿಯಾದ ಸಂದರ್ಭವನ್ನು ಸ್ಮರಿಸುತ್ತಾ, ಅಂರೀಯವರು ತನ್ನನ್ನು ಬಹಳವಾಗಿ ಆಕರ್ಷಿಸಿದ ಓರ್ವ ವ್ಯಕ್ತಿಯಾಗಿದ್ದರೆಂದು ಪ್ರಧಾನ ಮಂತ್ರಿ ಹೇಳಿದರು.

ಮಾರ್ಚ್ 28ರಂದು ರೋಸ್‌ಹಿಲ್ಲಿನ ಪ್ಲಾಸಾ ಹಾಲ್‌ನಲ್ಲಿ ಸೇರಿದ ಪೈಗಂಬರರ ದಿನಾಚರಣಾ ಸಮ್ಮೇಳನದಲ್ಲಿ ಧಾರಾಳ ಮುಸ್ಲಿಮರೂ ಕ್ರೈಸ್ತರೂ ಹಿಂದುಗಳೂ ಭಾಗವಹಿಸಿದ್ದರು. ಮೊರಿಷ್ಯಸ್ ಇನ್‌ಚಾರ್ಜ್ ಮಿಷ್ಯನರಿ ಮೌಲಾನಾ ಸಿದ್ದೀಖ್ ಅಹ್ಮದ್ ಮುನವ್ವರ್, ಮುಬಲ್ಲಿಗ್ ಮೌಲಾನಾ ಸಾಲಿಹ್ ಮುಹಮ್ಮದ್‌ಖಾನ್, ಮೊರಿಷ್ಯಸ್ ಅಹ್ಮದಿಯಾ ಕಾಲೇಜ್ ಪ್ರಿನ್ಸಿಪಾಲ್ ಪ್ರೊಫಸರ್ ರಶೀದ್ ಹುಸೈನ್ ಎಂಬಿವರ ನೇತೃತ್ವದಲ್ಲಿ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು.

ಮೊರಿಷ್ಯಸ್ ವಿದ್ಯಾಭ್ಯಾಸ ಮಂತ್ರಿ ಡಾಕ್ಟರ್ ಪಾರ್‌ಪೂನ್, ಪಾಕಿಸ್ತಾನದ ರಾಯಭಾರಿ ಮುಹಮ್ಮದ್ ಅನ್ವರ್‌ಖಾನ್, ಬಶೀರ್ ತೇಜೂ, ಮೊರಿಷ್ಯಸ್ ರಾಮಕೃಷ್ಣ ಮಿಷ್ಯನಿನ ಮೇಲಧಿಕಾರಿ ಸ್ವಾಮಿ ಉಪರಾನಂದ ಮೊದಲಾದವರು ಪೈಗಂಬರರ ಮಹನೀಯ ಜೀವಿತ ಹಾಗೂ ಉಪದೇಶಗಳ ಆದರ್ಶಗಳ ಕುರಿತು ಮಾತನಾಡಿದರು.

---

* ಅಹ್ಮದಿಯಾ ಸಂಘಟನೆಯ ಓರ್ವ ಉಜ್ವಲ ಪ್ರವರ್ತಕರಾಗಿದ್ದ ಅವರು ಶತ್ರುಗಳ ವಿಷಪ್ರಾಶನಕ್ಕೆ ತುತ್ತಾಗಿ 1964ನೇ ಒಕ್ಟೋಬರ್ 9ರಂದು ಮೃತಿಹೊಂದಿದರು. —ಸಂಪಾದಕ

---


ಇಸ್ಲಾಮಿನ ಯಥಾರ್ಥವಾದ ತತ್ವಜ್ಞಾನವನ್ನು ಮತ್ತು ಅದರ ಅಸದೃಶವಾದ ಮಹತ್ವವನ್ನು ಪ್ರಕಾಶಿಸಲಿಕ್ಕೂ ಜಾಗತಿಕ ಶಾಂತಿ, ಸರ್ವ ಸಮುದಾಯ ಮೈತ್ರಿ ಎಂಬೀ ಮಹತ್ಕಾರ್ಯಗಳನ್ನು ಲಕ್ಷ್ಯವಾಗಿರಿಸಿಕೊಂಡೂ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರಿಂದ ಸ್ಥಾಪಿತವಾದ ಒಂದು ಮಹತ್ ಸಂಘಟನೆಯಾಗಿದೆ ಅಹ್ಮದಿಯಾ ಜಮಾಅತ್.

ವಿಶ್ವಾದ ನಾನಾ ಭಾಗಗಳಲ್ಲೂ ಯುರೋಪ್, ಅಮೇರಿಕ, ಆಫ್ರಿಕ, ಆಸ್ಟ್ರೇಲಿಯ ಎಂಬೀ ಭೂಖಂಡಗಳಲ್ಲೂ ಹಝ್ರತ್ ಅಹ್ಮದ್ (ಅ)ರ ಮೂರನೆಯ ಖಲೀಫ ಹಾಗೂ ಅಹ್ಮದಿಯಾ ಜಮಾಅತಿನ ಈಗಿನ ಇಮಾಂ ಆಗಿರುವ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್‌ರವರ ನೇತೃತ್ವದಲ್ಲಿ ಪ್ರವರ್ತಿಸುತ್ತಿರುವ ಈ ಸಾರ್ವಲೌಕಿಕ ಸಂಘಟನೆಯ ಕುರಿತು ತಿಳಿಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಇಂಗ್ಲಿಷ್, ಹಿಂದಿ, ಉರ್ದು, ಮಲೆಯಾಳಂ ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸಲಾಗುವುದು.

**SECRETARY TABLIG,**
**Anjuman Ahmadiya,**
**P. O. Mogral,**
**Via - KUMBLA - 670321. Karala State.**



PHONE Office: 75565
Resi. : 77216

**P. ADURAHIMAN & CO.**

IMPORTERS & EXOPRTERS

**12/155, Halva Street, CALICUT-1.**

Speciality: TAPIOCA PRODUCTS

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರಕಾರ: ಅಬೂ ತಾಹಿರ್.

## ಅಧ್ಯಾಯ – 2.

## ನ್ಯಾಯ ವಿಚಾರಣೆ ಮತ್ತು ತೀರ್ಪು

[ ಸೂಚನೆ: ಶಿಲುಬೆಯ ಸಂಭವಕ್ಕೆ ಸಂಬಂಧಿಸಿದ ಸಾಂದರ್ಭಿಕ ಸಾಕ್ಷ್ಯಗಳನ್ನು ಒಂದು ತೀರ್ಪಿನ ರೂಪದಲ್ಲಿ ಓದುಗರಿಗೆ ಅರ್ಥವಾಗಲು ಸುಲಭವಾಗುವಂತೆ ಕೊಡಲಾಗಿದೆ. ]

ಯೇಸುಕ್ರಿಸ್ತರ ಶಾಪಗ್ರಸ್ತ ಮರಣ ಮತ್ತು ಪುನರುತ್ಥಾನದ ಕುರಿತು ಮುಸ್ಲಿಮರ ಒಂದು ಗುಂಪಿಗೂ ಕ್ರೈಸ್ತರ ಒಂದು ಗುಂಪಿಗೂ ಮಧ್ಯೆ ಒಮ್ಮೆ ವಾದ ವಿವಾದಗಳು ಉಂಟಾದುವು. ಯೇಸುಕ್ರಿಸ್ತರು ಶಿಲುಬೆಯಲ್ಲಿ ಶಾಪಗ್ರಸ್ತ ಮರಣವನ್ನನುಭವಿಸಿದರೆಂದು ಹೇಳುವುದು ಅವರನ್ನು ಹೀನೈಸಿದಂತೆ ಆಗುತ್ತದೆಯೆಂದು ಮುಸ್ಲಿಮರು ವಾದಿಸಿದಾಗ ಕ್ರೈಸ್ತರು ಆ ಸಂಭವ ಮಾನವ ಕುಲಕ್ಕೆ ದೇವರು ಅನುಗ್ರಹಿಸಿದ ಒಂದು ವರವೆಂಬ ನಿಲುವನ್ನು ಕೈಗೊಂಡರು. ಕ್ರೈಸ್ತರು ಮುಸ್ಲಿಮರ ವಿರುದ್ಧ ಕೋರ್ಟಿನಲ್ಲಿ ದಾವೆ ಹಾಕಿದರು ಮತ್ತು ಈ ಕೇಸನ್ನು ಇಬ್ಬರು ಜ್ಞಾನಿಗಳೂ ನಿಷ್ಪಕ್ಷರೂ ಆದ ನ್ಯಾಯಾಧೀಶರು ವಿಚಾರಣೆ ನಡೆಸಿದರು. ಅವರು ವಿಚಾರಣೆಯ ನಂತರ ಈ ಕೆಳಗಿನ ತೀರ್ಪನ್ನು ಕೊಟ್ಟರು.

### ತೀರ್ಪು

ವಾದಿ: ಒಬ್ಬ ಕ್ರೈಸ್ತ      ಪ್ರತಿವಾದಿ: ಒಬ್ಬ ಮುಸ್ಲಿಂ.

ವಿಷಯ:– ಶಿಲುಬೆಯಲ್ಲಿ ಯೇಸುಕ್ರಿಸ್ತರ ಮರಣ ಮತ್ತು ಅವರ ಪುನರುತ್ಥಾನ.

ಈ ಕೇಸು ಒಂದು ಪ್ರಧಾನ ಚಾರಿತ್ರಿಕ ಸಂಭವದ ಕುರಿತಾಗಿದೆ. ವಾದಿ ಈ ಕೇಸನ್ನು ಎಪ್ರಿಲು 8ನೇ ತಾರೀಕಿನಂದು ಪ್ರತಿವಾದಿಯ ಮೇಲೆ ಮಾಡಿರುವುದಾಗಿದೆ. ಎರಡು ಕಡೆಯುವರ ವಾದಗಳನ್ನು ಕೇಳಿದ ನಂತರ ಈ ಕೆಳಗಿನ ಸಂಗತಿಗಳು ವಿವಾದ ವಿಷಯುಗಳೆಂದು ತೀರ್ಮಾನಿಸಿ ವಿಚಾರಣೆ ನಡೆಸಲಾಯಿತು.

1. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೋ?

2. ಅವರು ಪುನರುತ್ಥಾನಗೊಂಡರೋ ?

3. ಅವರು ಪುನರುತ್ಥಾನಗೊಂಡುದು ಸೂಕ್ಷ್ಮ ಶರೀರದೊಂದಿಗೆಯೋ ಅಥವಾ ಮಾಂಸವೂ ಎಲುಬೂ ಕೂಡಿದ ಸ್ಥೂಲ ಶರೀರದೊಂದಿಗೆಯೋ ?

ವಿಚಾರಣೆಯನ್ನು ಎರಡು ದಿವಸ ನಡೆಸಲಾಯಿತು. ಎರಡು ಪಕ್ಷದವರೂ ತಮ್ಮ ವಾದಗಳನ್ನು ಸ್ಪಷ್ಟಗೊಳಿಸಿದರು. ಎರಡು ಪಕ್ಷಗಳ ವಾದಗಳನ್ನು ಕೇಳಿ ಎಲ್ಲಾ ಸಂಗತಿಗಳನ್ನು ಪರಾಂಬರಿಸಿ ನಾವು ನಮ್ಮ ನಿಷ್ಪಕ್ಷ ತೀರ್ಪನ್ನು ಕೊಡುತ್ತೇವೆ. ವಾದಿಯ ಸಾಕ್ಷ್ಯಾಧಾರ

ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರೆಂಬ ನಾಲ್ಕು ತಥಾಕಥಿತ ಪ್ರತ್ಯಕ್ಷ ಸಾಕ್ಷಿಗಳು ಸರ್ವಜ್ಞನಾದ ದೇವರ ಪ್ರೇರೇಪಣೆಯಿಂದ ವಿರಚಿಸಿದ ನಾಲ್ಕು ಗ್ರಂಥಗಳಾಗಿವೆ. ವಿಚಾರಣೆಯಲ್ಲಿ ಈ ಗ್ರಂಥಗಳ ಕುರಿತು ಮಾಡಿದ ವಾದವನ್ನು ನ್ಯಾಯೀಕರಿಸಲಾಗಿಲ್ಲ. ಅವುಗಳನ್ನು ಬರೆದವರ ಸಹಿಯಾಗಲೀ ಅವುಗಳು ದೇವರ ಪ್ರೇರೇಪಣೆಯಿಂದ ಬರೆದುವೆಂಬುದಕ್ಕೆ ಸಾಕ್ಷ್ಯವಾಗಲೀ ದೊರೆತಿಲ್ಲ. ಆದರೆ ಇವುಗಳು ಈ ವಿಷಯದ ಕುರಿತು ಬರೆಯಲಾದ ಬಹು ಪುರಾತನ ದಾಖಲೆಗಳಾದ ಕಾರಣ ಇವುಗಳನ್ನು ಕಡೆಗಣಿಸಲು ಸಾಧ್ಯವಿಲ್ಲ. ಒಂದು ತೀರ್ಮಾನ ಕೈಗೊಳ್ಳಲು ಇವುಗಳು ಎಷ್ಟರಮಟ್ಟಿಗೆ ಸಹಾಯಮಾಡುತ್ತವೆಯೆಂಬುದನ್ನು ವಿಚಾರಿಸುವ.

## ವಿವಾದ ವಿಷಯಗಳು

ಮೂರು ವಿವಾದ ವಿಷಯಗಳು ಪರಸ್ಪರ ನಿಕಟ ಸಂಬಂಧವನ್ನು ಹೊಂದಿರುವ ಕಾರಣ ಅವುಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ತೀರ್ಮಾನಿಸಲಾಗುವುದು ವಾದಿಗೆ ಸಂಬಂಧಿಸಿದ ಸಾಕ್ಷ್ಯಗಳು ಪರಸ್ಪರ ವಿರುದ್ಧವಾಗಿವೆ.

ನಾಲ್ವರು ಸಾಕ್ಷಿಗಳು ಸಾಮಾನ್ಯ ವಿಷಯಗಳ ಕುರಿತೂ ಪ್ರಧಾನ ವಿಷಯಗಳ ಕುರಿತೂ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಹೊಂದಿರುವುದು ಕಾಣುತ್ತದೆ. ಭಿನ್ನಾಭಿಪ್ರಾಯಗಳನ್ನು ಸೂಚಿಸುವ ಕೆಲವು ಪ್ರಧಾನ ಸಂಗತಿಗಳನ್ನು ಈ ಕೆಳಗೆ ಸೂಚಿಸುತ್ತೇವೆ.

### 1. ಮೋಸಗಾರ ಮತ್ತು ಆತನ ಸಹಾಯಕರು

ಮತ್ತಾಯ ಮತ್ತು ಮಾರ್ಕ ಬರೆದ ಗ್ರಂಥಗಳಲ್ಲಿ ಯೇಸುಕ್ರಿಸ್ತರನ್ನು ಮೋಸಗೊಳಿಸಿದ ಅವರ ಶಿಷ್ಯನಾದ ಯೂದನು **ಪ್ರಧಾನ ಪುರೋಹಿತ ಮತ್ತು ಜನರ ಹಿರಿಯರು ಕಳುಹಿಸಿದ ಜನರ ಗುಂಪಿನ ಜೊತೆ** ಗೆತ್ಸೇಮನೆ ತೋಟಕ್ಕೆ ಯೇಸುಕ್ರಿಸ್ತರನ್ನು ಬಂಧಿಸಲು ಬಂದನೆಂದು ಬರೆದಿದೆ. ಆದರೆ ಲೂಕನು ಬರೆದ ಗ್ರಂಥದಲ್ಲಿ ಯೂದನು **ಪ್ರಧಾನ ಪುರೋಹಿತ, ದೇವಾಲಯದ ಕಾವಲಿನ ದಳವಾಯಿ ಮತ್ತು ಊರ ಹಿರಿಯರೊಂದಿಗೆ** ಬಂದನೆಂದು ಬರೆದಿದೆ. (ಲೂಕ 22:52 ನೋಡಿರಿ).

### 2. ಯೇಸುಕ್ರಿಸ್ತರನ್ನು ಬಂಧಿಸಿದುದು ಹೇಗೆ?

ಮತ್ತಾಯ, ಮಾರ್ಕ ಮತ್ತು ಲೂಕ ಇವರ ಗ್ರಂಥಗಳ ಪ್ರಕಾರ ಯೂದನು ಯೇಸುಕ್ರಿಸ್ತರನ್ನು ಬಂಧಿಸಲು ಬಂದವರಿಗೆ ಗುರುತು ತೋರಿಸಿ ಕೊಟ್ಟನು. ಉದಾಹರಣೆಗೆ ಈ ವಾಕ್ಯಗಳನ್ನು ನೋಡಿರಿ: "ಇದಲ್ಲದೆ ಆತನನ್ನು ಹಿಡಿದುಕೊಡುವವನು ಅವರಿಗೆ ನಾನು ಯಾರಿಗೆ ಮುದ್ದಿಡುತ್ತೇನೋ ಅವನೇ ಆತನು; ಅವನನ್ನು ಹಿಡಿಯಿರಿ ಎಂದು ಗುರುತು ಹೇಳಿಕೊಟ್ಟನು; ಕೂಡಲೇ ಅವನು ಯೇಸುವಿನ ಬಳಿಗೆ ಹೋಗಿ – ಗುರುವೇ ನಮಸ್ಕಾರ ಎಂದು ಹೇಳಿ ಆತನಿಗೆ ಮುದ್ದಿಟ್ಟನು. ಯೇಸು ಅವನಿಗೆ—ಗೆಳೆಯನೇ ನೀನು ಬಂದ ಕೆಲಸ ಇದೇಯೋ? ಎಂದು ಹೇಳಲು ಅವರು ಹತ್ತಿರಕ್ಕೆ ಬಂದು ಯೇಸುವಿನ ಮೇಲೆ ಕೈಹಾಕಿ ಆತನನ್ನು ಹಿಡಿದರು." (ಮತ್ತಾಯ 26 : 48-50)*. ಯೇಸುಕ್ರಿಸ್ತರ ಬಂಧನದ ಕುರಿತು ಬೇರೆ ರೀತಿಯ ವಿವರಣೆಯನ್ನು ಯೋಹಾನನ ಗ್ರಂಥದಲ್ಲಿ ಬರೆಯಲಾಗಿದೆ. ಯೂದನು ಜನರ ಗುಂಪಿನೊಂದಿಗೆ ಬಂದಾಗ "ಆಗ ಯೇಸು ತನ್ನ ಮೇಲೆ ಬರುವುದನ್ನೆಲ್ಲಾ ತಿಳಿದು ಹೊರಗೆ ಹೋಗಿ—ನೀವು ಯಾರನ್ನು ಹುಡುಕುತ್ತೀರಿ ಎಂದು ಅವರನ್ನು ಕೇಳಿದನು: ಅದಕ್ಕೆ ಅವರು ನಜರೇತಿನ ಯೇಸುವನ್ನು ಹುಡುಕುತ್ತೇವೆ ಅನ್ನಲು ಯೇಸು ಅವರಿಗೆ – ನಾನೇ ಅವನು ಎಂದು ಹೇಳಿದನು. ಆತನನ್ನು ಹಿಡಿದುಕೊಡುವ ಯೂದನು ಸಹ ಅವರ ಸಂಗಡ ನಿಂತಿದ್ದನು. ಆತನು ಅವರಿಗೆ – ನಾನೇ ಅವನು ಎಂದು ಹೇಳಿದಾಗ ಅವರು ಹಿಂದಕ್ಕೆ ಸರಿದು ನೆಲದ ಮೇಲೆ ಬಿದ್ದರು. ಆತನು—ಯಾರನ್ನು ಹುಡುಕುತ್ತೀರೆಂದು ತಿರುಗಿ ಅವರನ್ನು ಕೇಳಲು ಅವರು— ನಜರೇತಿನ ಯೇಸುವನ್ನು ಹುಡುಕುತ್ತೇವೆ. ಅಂದರು. ಅದಕ್ಕೆ ಯೇಸು—ನಾನೇ ಅವನೆಂದು ನಿಮಗೆ ಹೇಳಿದೆನಲ್ಲಾ; ನೀವು ನನ್ನನ್ನೇ ಹುಡುಕುವವರಾದರೆ ಇವರನ್ನು ಹೋಗಬಿಡಿರಿ ಅಂದನು.'' (ಯೋಹಾನ 18:4–8). ಪೇತ್ರನು ಮಹಾಯಾಜಕನ ಆಳನ್ನು ಹೊಡೆದು ಅವನ ಬಲಗಿವಿಯನ್ನು ಕತ್ತರಿಸಿದನು (ಯೋಹಾನ 18:10). ಯೇಸುವನ್ನು ಬಂಧಿಸಿ ಕಟ್ಟಿದರು. (ಯೋಹಾನ 18:12).

**3.** ಲೂಕ ಮತ್ತು ಯೋಹಾನನ ಪ್ರಕಾರ ಮಹಾಯಾಜಕನ ಕೆಲಸಗಾರನ ಕಿವಿ ಕತ್ತರಿಸಲ್ಪಟ್ಟುದುದು ಯೇಸುಕ್ರಿಸ್ತರ ಬಂಧನದ ಮೊದಲು. ಇದು ನಡೆದುದು

---

* ಬೈಬಲ್ ವಾಕ್ಯಗಳ ಕನ್ನಡಾನುವಾದ ಮಂಗಳೂರು ಬಾಸೆಲ್ ಮಿಶ್ಯನ್ 1936ನೇ ಇಸವಿಯಲ್ಲಿ ಪ್ರಕಟಿಸಿದ ಬೈಬಲಿನಿಂದ ಉದ್ಧೃತ

—ಅನುವಾದಕ.

ಬಂಧನದ ನಂತರವೆಂದೂ ಮತ್ತಾಯ ಮತ್ತು ಮಾರ್ಕ್ ಹೇಳುತ್ತಾರೆ.

**4.** ಯೂದನು ಪಶ್ಚಾತ್ತಾಪಪಟ್ಟು, ತಾನು ಯೇಸುಕ್ರಿಸ್ತರನ್ನು ಹಿಡಿದು ಕೊಟ್ಟದ್ದಕ್ಕಾಗಿ ಪಡೆದ ಮೂವತ್ತು ರೂಪಾಯಿಗಳನ್ನು ಮಹಾಯಾಜಕರಿಗೂ ಹಿರಿಯರಿಗೂ ಹಿಂತಿರುಗಿಸಿ ಕೊಡಲು ಯತ್ನಿಸಿದನು. ಅವರು ಸ್ವೀಕರಿಸಲಿಲ್ಲ. ಅವನು ಆ ನಾಣ್ಯಗಳನ್ನು ದೇವಾಲಯದಲ್ಲಿ ಬಿಸಾಡಿ ಹೋಗಿ ಕುತ್ತಿಗೆಗೆ ಹಗ್ಗ ಹಾಕಿ ಆತ್ಮಹತ್ಯೆ ಮಾಡಿಕೊಂಡನು. ಪ್ರಧಾನ ಪುರೋಹಿತರೂ ಊರ ಹಿರಿಯರೂ ಪುನರಾಲೋಚಿಸಿ ಕುಂಬಾರನ ಹೊಲವೆಂಬ ಭೂಮಿಯನ್ನು ಅಪರಿಚಿತರ ಶವಗಳನ್ನು ಸಮಾಧಿ ಮಾಡಲಿಕ್ಕಾಗಿ ಆ ಹಣದಿಂದ ಕ್ರಯಕ್ಕೆ ಪಡೆದುಕೊಂಡರು. ಆ ಸ್ಥಳಕ್ಕೆ ಈಗಲೂ "ರಕ್ತದ ಹೊಲ''ವೆಂಬ ಹೆಸರಿದೆ. (ಮತ್ತಾಯ 27 : 3—9 ಸಾರಾಂಶ). ಈ ವಿಷಯದ ಕುರಿತು ಇತರ ಮೂವರ ಗ್ರಂಥಗಳಲ್ಲಿ ಯಾವುದೇ ವಿವರಣೆ ಇಲ್ಲ. ಆದರೆ "ಅಪೊಸ್ತಲರ ಕೃತ್ಯಗಳು'' ಎಂಬ ಬೈಬಲ್ ವಿಭಾಗದಲ್ಲಿ (ಇದು ಲೂಕನಿಂದ ಬರೆಯಲ್ಪಟ್ಟಿದೆಂದು ಭಾವಿಸಲಾಗಿದೆ) ಪೇತ್ರನು ಈ ರೀತಿ ಹೇಳಿರುವನು: "ಈ ಮನುಷ್ಯನು (ಯೂದನು) ತನ್ನ ದ್ರೋಹದಿಂದ ಸಂಪಾದಿಸಿದ ಹಣಕ್ಕೆ ಒಂದು ಹೊಲವನ್ನು ಕೊಂಡು ಕೊಂಡನು; ಮತ್ತು ತಲೆ ಕೆಳಗಾಗಿ ಬಿದ್ದು ಅವನ ಹೊಟ್ಟೆ ಒಡೆದು ಕರುಳುಗಳೆಲ್ಲಾ ಹೊರಗೆ ಸುರಿದವು.'' (ಅಪೊಸ್ತಲರ ಕೃತ್ಯಗಳು 1 : 18)

### 5. ಶಿಲುಬೆ ಹೊತ್ತದ್ದು ಯಾರು ?

ಮತ್ತಾಯ ಮತ್ತು ಮಾರ್ಕರ ಪ್ರಕಾರ ಕುರೇನೆ ಪಟ್ಟಣದ ಸೀಮೋನನೆಂಬವನನ್ನು ಶಿಲುಬೆಯನ್ನು ಗೊಲ್ಗಥಾ ಅಥವಾ ಕಪಾಲ ಸ್ಥಳವೆಂಬ ಸ್ಥಾನಕ್ಕೆ ಹೊತ್ತು ಕೊಂಡು ಹೋಗಲು ನಿರ್ಬಂಧಿಸಲಾಯಿತು. (ಮತ್ತಾಯ 27 : 32).

ಯೇಸುಕ್ರಿಸ್ತರು ಸ್ವತ: ಶಿಲುಬೆಯನ್ನು ಹೊತ್ತು ಕೊಂಡು "ಕಪಾಲ ಸ್ಥಳ''ವೆಂಬ ಸ್ಥಾನಕ್ಕೆ ಕೊಂಡು ಹೋದುದಾಗಿ ಯೋಹಾನನ ಗ್ರಂಥದಲ್ಲಿದೆ (ಯೋಹಾನ 19 : 17)

**6.** ಯೇಸುಕ್ರಿಸ್ತರನ್ನು ಶಿಲುಬೆಗೆ ಕೊಟ್ಟಾಗ ಅವರ ತಲೆಯ ಮೇಲ್ಗಡೆ ಬರೆದು ಇರಿಸಿದ ಕೆಲವೇ ಶಬ್ದಗಳನ್ನೊಳಗೊಂಡ ಲಿಖಿತವನ್ನು ವಿವರಿಸುವುದರ ಕುರಿತು ಸಹ ಈ ನಾಲ್ವರು ಸಾಕ್ಷಿಗಳು ಐಕ್ಯಮತ್ಯವನ್ನು ತೋರಿಸಿಲ್ಲ:

ಮತ್ತಾಯ: "ಇದು ಯೇಸು, ಯಹೂದ್ಯರ ಅರಸ''
ಮಾರ್ಕ: "ಯಹೂದ್ಯರ ಅರಸ''
ಲೂಕ: "ಇದು ಯಹೂದ್ಯರ ಅರಸ''
ಯೋಹಾನ: "ನಜರೇತಿನ ಯೇಸು ಯಹೂದ್ಯರ ಅರಸ''

ಈ ರೀತಿ ನಾಲ್ವರು ಭಿನ್ನ ಲಿಖಿತ ರೂಪಗಳನ್ನು ಕೊಟ್ಟಿರುವರು.

**7.** ಮತ್ತಾಯ ಮತ್ತು ಮಾರ್ಕರ ಪ್ರಕಾರ ಯೇಸುಕ್ರಿಸ್ತರ ಜೊತೆಗೆ ಶಿಲುಬೆಗೆ ಕೊಡಲ್ಪಟ್ಟ ಕಳ್ಳರು ಇಬ್ಬರೂ ಯೇಸುಕ್ರಿಸ್ತರನ್ನು ದೂಷಿಸಿದರು. ಆದರೆ ಲೂಕನ ಪ್ರಕಾರ ಒಬ್ಬ ಕಳ್ಳ ದೂಷಿಸಿದಾಗ ಇನ್ನೊಬ್ಬ ಆತನನ್ನು ಗದರಿಸಿ ಈ ರೀತಿ ಎಂದನು: ''ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವುದಿಲ್ಲವೋ" (ಲೂಕ 23 : 40). ಅನಂತರ ಯೇಸುಕ್ರಿಸ್ತರೊಡನೆ: ''ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ'' ಎಂದನು. (ಲೂಕ 23 : 42). ಆತನು ತನ್ನೊಡನೆ ಸ್ವರ್ಗದಲ್ಲಿ ಆ ದಿನವೇ ಇರುವುದಾಗಿ ಯೇಸುಕ್ರಿಸ್ತರು ಆತನಿಗೆ ವಾಗ್ದಾನ ಮಾಡಿದುದಾಗಿ ಸಹ ಲೂಕನ ಗ್ರಂಥದಲ್ಲಿದೆ. (ಲೂಕ 23:43)

ಯೋಹಾನನು ಈ ಪ್ರಾಮುಖ್ಯ ಸಂಭಾಷಣೆಯ ಕುರಿತು ಯಾವುದೇ ಸೂಚನೆ ಸಹ ನೀಡಿಲ್ಲ.

### 8. ಶಿಲುಬೆಗೆ ಹಾಕಿದ ಸಮಯ

ಮಾರ್ಕನ ಪ್ರಕಾರ ಯೇಸುಕ್ರಿಸ್ತರನ್ನು ಶಿಲುಬೆಗೆ ಕೊಟ್ಟಾಗ ಮೂರು ತಾಸಾಗಿತ್ತೆಂದು (ಮಾರ್ಕ 15:25) ಬರೆಯಲಾಗಿದೆ. ಯೋಹಾನನ ಗ್ರಂಥದಲ್ಲಿ ಪಿಲಾತನು ಯೇಸು ಕ್ರಿಸ್ತರನ್ನು ಯಹೂದ್ಯರಿಗೆ ಒಪ್ಪಿಸಿದ ಸಮಯ ಆರು ತಾಸಾಗಿತ್ತೆಂದು ಬರೆಯಲಾಗಿದೆ. (ಯೋಹಾನ 19 : 14). ಮತ್ತಾಯ ಮತ್ತು ಲೂಕರು ಆರನೇ ತಾಸಿನಿಂದ ಒಂಭತ್ತನೇ ತಾಸಿನ ತನಕ ಊರಲ್ಲೆಲ್ಲಾ ಕತ್ತಲೆ ಕವಿದಿತ್ತೆಂದು ಹೇಳುತ್ತಾರೆ.

### 9. ಯೇಸು ಕ್ರಿಸ್ತರು ಪ್ರಾಣಬಿಟ್ಟುದು ಹೇಗೆ?

"ಯೇಸು ತಿರಿಗಿ ಮಹಾ ಧ್ವನಿಯಿಂದ ಕೂಗಿ ಪ್ರಾಣ ಬಿಟ್ಟನು.'' (ಮತ್ತಾಯ 27:50)

''ಯೇಸು ಮಹಾ ಧ್ವನಿಯನ್ನು ಗೈದು ಪ್ರಾಣ ಬಿಟ್ಟನು'' (ಮಾರ್ಕ 15:37)

''ಯೇಸು– ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿ ಕೊಡುತ್ತೇನೆ ಎಂದು ಮಹಾ ಧ್ವನಿಯಿಂದ ಕೂಗಿದನು. ಇದನ್ನು ಹೇಳಿದ ಮೇಲೆ ಪ್ರಾಣ ಬಿಟ್ಟನು'' (ಲೂಕ 23:46).

''ಯೇಸು ಆ ಹುಳಿ ರಸವನ್ನು ತಕ್ಕೊಂಡ ಮೇಲೆ- ತೀರಿತು ಎಂದು ಹೇಳಿ ತಲೆ ಬಾಗಿಸಿ ಆತ್ಮವನ್ನು ಒಪ್ಪಿಸಿ ಕೊಟ್ಟನು.'' (ಯೋಹಾನ 19:30).

**10. ಯೇಸು ಕ್ರಿಸ್ತರು ಸತ್ಪುರುಷರೆಂದೂ ದೈವ ಪುತ್ರರೆಂದೂ ಶತಾಧಿಪತಿಯು ಹೇಳಲು ಕಾರಣವೇನು ?**

ಶತಾಧಿಪತಿಯು ಮತ್ತು ಅವನ ಸಂಗಡ ಯೇಸು ವನ್ನು ಕಾಯುತ್ತಿದ್ದವರು **ಭೂಕಂಪವನ್ನೂ ನಡೆದ ಸಂಗತಿಗಳನ್ನೂ ನೋಡಿ ಹೆದರಿಕೊಂಡು**–ನಿಜವಾಗಿ ಈತನು ದೇವಕುಮಾರನಾಗಿದ್ದನು ಅಂದರು.

(ಮತ್ತಾಯ 27 : 54)

''ಯೇಸು ಮಹಾ ಧ್ವನಿಗೈದು ಪ್ರಾಣ ಬಿಟ್ಟನು. ಆಗ ದೇವಾಲಯದ ತೆರೆಯು ಮೇಲಿಂದ ಕೆಳಗಿನ ವರೆಗೂ ಹರಿದು ಎರಡು ಭಾಗವಾಯಿತು. **ಆತನು ಹೀಗೆ ಪ್ರಾಣ ಬಿಟ್ಟದ್ದನ್ನು** ಆತನ ಹತ್ತಿರ ಎದುರಿಗೆ ನಿಂತಿದ್ದ ಶತಾಧಿಪತಿಯು ನೋಡಿ – ನಿಜವಾಗಿ ಈ ಮನುಷ್ಯನು ದೇವಕುಮಾರನಾಗಿದ್ದನು ಅಂದನು. (ಮಾರ್ಕ 15:39)

ಈ ಮನುಷ್ಯನು ಸತ್ಪುರುಷನೇ ನಿಜ ಎಂದು ದೇವ ರನ್ನು ಕೊಂಡಾಡಿದನು.'' (ಲೂಕ 23:47).

**11. ಅರಿಮಥಾಯದ ಯೋಸೆಫನು ಯಾರ ?**

ಮತ್ತಾಯನು ಆತನು ಯೇಸುಕ್ರಿಸ್ತರ ಶಿಷ್ಯನೆಂದು ಹೇಳುತ್ತಾನೆ. ಆತನು ಹಿರಿಸಭೆಯ ಸನ್ಮಾನ್ಯ ಸದಸ್ಯ ನಾಗಿದ್ದನೆಂದೂ ದೇವರ ರಾಜ್ಯವನ್ನು ಎದುರು ನೋಡು ತ್ತಿದ್ದನೆಂದೂ ಮಾರ್ಕನೂ ಲೂಕನೂ ಹೇಳುತ್ತಾರೆ. ಆತನು ಯಹೂದ್ಯರ ಹೆದರಿಕೆಯಿಂದಾಗಿ ರಹಸ್ಯವಾಗಿ ಯೇಸು ಕ್ರಿಸ್ತರ ಶಿಷ್ಯನಾಗಿದ್ದನೆಂದು ಯೋಹಾನನು ಹೇಳುತ್ತಾನೆ.

**12.** ಧನಿಕನಾದ ಅರಿಮಥಾಯದ ಯೋಸೆ ಫನು ಪಿಲಾತನ ಬಳಿಗೆ ಹೋಗಿ ಯೇಸುಕ್ರಿಸ್ತರ ಶರೀರ ವನ್ನು ತನಗೆ ದಯಪಾಲಿಸಬೇಕೆಂದು ಪ್ರಾರ್ಥಿಸಿದಾಗ ಮತ್ತಾಯ ಮತ್ತು ಯೋಹಾನರು ಬರೆದಂತೆ ಯಾವುದೇ ವಿಚಾರಣೆ ಮಾಡದೆ (ಆದರೆ ಮಾರ್ಕ ಮತ್ತು ಲೂಕರು ಶತಾಧಿಪತಿಯೊಡನೆ ಯೇಸುಕ್ರಿಸ್ತರ ಮರಣದ ಕುರಿತು ಪಿಲಾತನು ವಿಚಾರಿಸಿದುದಾಗಿ ಬರೆದಿರುವರು) ಶರೀರ ವನ್ನು ಕೊಂಡು ಹೋಗಲು ಅನುಮತಿಸಿದನು. ಮತ್ತಾ ಯ, ಮಾರ್ಕ ಮತ್ತು ಲೂಕರು ಯೋಸೆಫನೊಬ್ಬನೇ ಶರೀರವನ್ನು ನಾರುಬಟ್ಟೆಯಲ್ಲಿ ಸುತ್ತಿ ದೊಡ್ಡ ಕಲ್ಲಿನಲ್ಲಿ ಕೊರೆದ ಹೊಸ ಸಮಾಧಿಯಲ್ಲಿರಿಸಿದನೆಂದು ಬರೆದಿರು ವರು. ಆದರೆ ಯೋಹಾನನು ನಿಕೊದೇಮನು ಯೋಸೆ ಫನ ಜೊತೆಗಿದ್ದನೆಂದು ಬರೆದಿರುವನು.

ಇದೇ ರೀತಿ ಶಿಲುಬೆಗೆ ಕೊಡಲ್ಪಟ್ಟ ನಂತರ ನಡೆದ ಪುನರುತ್ಥಾನ ಸಂಭವದ ಕುರಿತು ಸಹ ವಿವರಣೆಯಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ.

**1. ಯಾರು ಮೊದಲು ಸಮಾಧಿಯ ಬಳಿಗೆ ಬಂದರು ಮತ್ತು ಯಾವಾಗ ಬಂದರು ?**

"ಸಬ್ಬತ್ ದಿನ ಆದ ಮೇಲೆ ವಾರದ ಮೊದಲನೆಯ **ದಿವಸ ಬೆಳಗಾಗುವಾಗ** ಮಗ್ದಲದ ಮರಿಯಳೂ ಆ **ಬೇರೆ ಮರಿಯಳೂ** ಸಮಾಧಿ ನೋಡುವುದಕ್ಕೆ ಬಂ ದರು.'' (ಮತ್ತಾಯ 28:1)

''ಮತ್ತು ವಾರದ ಮೊದಲನೆಯ ದಿನ ಬೆಳಿಗ್ಗೆ **ಹೊತ್ತು ಮೂಡುವಾಗ** ಅವರು ಸಮಾಧಿಯ ಬಳಿಗೆ ಬಂದರು.'' (ಮಾರ್ಕ 16:3)

''ವಾರದ ಮೊದಲನೆಯ ದಿವಸದಲ್ಲಿ ಇನ್ನೂ ಮೊಬ್ಬಿರುವಾಗ.'' (ಲೂಕ 24 : 1)

''ವಾರದ ಮೊದಲನೆಯ ದಿನದಲ್ಲಿ ಮಗ್ದಲದ ಮರಿಯಳು ಮುಂಜಾನೆ **ಇನ್ನೂ ಕತ್ತಲೆ ಇರುವಾಗಲೇ** ಸಮಾಧಿಯ ಬಳಿಗೆ ಬಂದು....''

(ಯೋಹಾನ 20:1)

ಮಾರ್ಕ ಮತ್ತು ಮತ್ತಾಯರ ಪ್ರಕಾರ ಸಮಾಧಿಗೆ ಬಂದವರು ಮರಿಯ ಎಂಬ ಒಂದು ಹೆಸರಿನ ಇಬ್ಬರು ಸ್ತ್ರೀಯರು. ಆದರೆ ಲೂಕನ ಪ್ರಕಾರ ಆ ಸ್ತ್ರೀಯರು ಮಗ್ದಲದ ಮರಿಯಳು, ಯೋಹಾನಳು, ಯಾಕೋಬನ ತಾಯಿಯಾದ ಮರಿಯಳು ಮತ್ತು ಇತರ ಸ್ತ್ರೀಯರೆಂದೂ ಆದರೆ ಯೋಹಾನನು ಹೇಳುವುದು ಮಗ್ದಲದ ಮರಿಯ ಮಾತ್ರ ಬಂದುದೆಂದೂ ಆಗಿದೆ.

## 2. ಭೂಕಂಪ ಮತ್ತು ದೇವದೂತ

"ಆಗ ಮಹಾ ಭೂಕಂಪವಾಯಿತು. ಕರ್ತನ ದೂತನು ಆಕಾಶದಿಂದ ಇಳಿದು ಬಂದು ಆ ಕಲ್ಲನ್ನು ಬಾಗಿಲಿನಿಂದ ಉರುಳಿಸಿ ಅದರ ಮೇಲೆ ಕೂತುಕೊಂಡನು" (ಮತ್ತಾಯ 28:2). ಉಳಿದ ಮೂವರು ಭೂಕಂಪದ ವಿಷಯವಾಗಿ ಏನೂ ಹೇಳುವುದಿಲ್ಲ. ಕಲ್ಲನ್ನು ಉರುಳಿಸಿ ಅದರ ಮೇಲೆ ಕುಳಿತುದರ ಕುರಿತು ಸಹ ಏನೂ ಹೇಳುವುದಿಲ್ಲ ಅವರ ಹೇಳಿಕೆ ಪ್ರಕಾರ ಕಲ್ಲಿನ ಮೇಲೆ ಯಾರೂ ಕುಳಿತಿರಲಿಲ್ಲ. ಮರಿಯ ಎಂಬ ಒಂದೇ ಹೆಸರಿನ ಇಬ್ಬರು ಸ್ತ್ರೀಯರು ಸಮಾಧಿಯ ಬಳಿಗೆ ಬಂದಾಗ ಸಮಾಧಿಯ ಬಾಗಿಲಿಗೆ ಅಡ್ಡವಾಗಿಟ್ಟ ಕಲ್ಲು ಅದಕ್ಕೆ ಮೊದಲೇ ಉರುಳಿ ಹೋಗಿತ್ತೆಂದು ಮಾರ್ಕನು ಬರೆದಿರುತ್ತಾನೆ. ಸಮಾಧಿಯ ಒಳಗೆ ಪ್ರವೇಶಿಸುವಾಗ ಒಬ್ಬ ಯುವಕನು ಬಲ ಭಾಗದಲ್ಲಿ ಕುಳಿತಿರುವುದಾಗಿ ಕಂಡು ಅವರು ಹೆದರಿದರು. ಅಲ್ಲಿದ್ದದ್ದು ಒಬ್ಬನಲ್ಲ ಇಬ್ಬರೆಂದೂ ಅವರು ನಿಂತಿದ್ದರೆಂದೂ ಲೂಕ ಬರೆದಿರುತ್ತಾನೆ. ಆದರೆ ಯೋಹಾನನ ಪ್ರಕಾರ ಅವರಿಬ್ಬರೂ ಸಮಾಧಿಯೊಳಗೆ ಒಬ್ಬ ತಲೆಯ ಬಳಿಯೂ ಇನ್ನೊಬ್ಬ ಕಾಲಿನ ಬಳಿಯೂ ಕುಳಿತಿದ್ದನೆಂದು ತಿಳಿದು ಬರುತ್ತಿದೆ.

## 3. ಯೇಸು ಕ್ರಿಸ್ತರು ಪುನರುತ್ಥಾನಗೊಂಡ ಸಂಗತಿಯನ್ನು ಯಾರು ಮೊದಲು ತಿಳಿಸಿದರು ?

ಕಲ್ಲಿನ ಮೇಲೆ ಕುಳಿತ ಕರ್ತನ ದೂತನು ಇಬ್ಬರು ಮರಿಯರಿಗೆ ಆತನು ಅಲ್ಲಿ ಇಲ್ಲವೆಂದೂ ಆತನು ಎದ್ದು ಹೋಗಿರುವನೆಂದು ಹೇಳಿದುದಾಗಿ ಮತ್ತಾಯನು ಬರೆದಿರುವನು. ಸಮಾಧಿಯ ಒಳಗೆ ಕುಳಿತಿದ್ದ ಮನುಷ್ಯರು ಆ ರೀತಿ ಹೇಳಿದುದಾಗಿ ಮಾರ್ಕನು ಹೇಳುತ್ತಾನೆ. ಸ್ತ್ರೀಯರು ದೇಹವನ್ನು ಸಮಾಧಿಯೊಳಗೆ ಕಾಣದೆ ಗಾಬರಿಗೊಂಡಾಗ ಸಮಾಧಿಯೊಳಗೆ ನಿಂತಿದ್ದ ಮನುಷ್ಯರು "ಆತನು ಇಲ್ಲಿ ಇಲ್ಲ. ಆತನು ಎದ್ದು ಹೋಗಿರುವನೆಂದು" ಹೇಳಿದುದಾಗಿ ಲೂಕನು ಬರೆದಿರುವನು. ಆದರೆ ಯೋಹಾನನು ಹೇಳುವ ಕಥೆಯೇ ಬೇರೆ. ಆತನು ಈ ರೀತಿ ಹೇಳುತ್ತಾನೆ:

ವಾರದ ಮೊದಲನೆಯ ದಿನದಲ್ಲಿ ಮಗ್ದಲದ ಮರಿಯಳು ಮುಂಜಾನೆ ಇನ್ನೂ ಕತ್ತಲೆ ಇರುವಾಗಲೇ ಸಮಾಧಿಯ ಬಳಿಗೆ ಬಂದು ಸಮಾಧಿಯ ಕಲ್ಲು ಅಲ್ಲಿಂದ ತೆಗೆದಿರುವುದನ್ನು ಕಂಡಳು. ಆಕೆ ಸೀಮೋನ ಪೇತ್ರನ ಬಳಿಗೂ ಯೇಸುವಿಗೆ ಪ್ರಿಯನಾಗಿದ್ದ ಆ ಮತ್ತೊಬ್ಬ ಶಿಷ್ಯನ ಬಳಿಗೂ ಓಡಿ ಬಂದು ಅವರಿಗೆ-ಸ್ವಾಮಿಯನ್ನು ಸಮಾಧಿಯೊಳಗಿಂದ ತೆಗೆದುಕೊಂಡು ಹೋಗಿ ಆತನನ್ನು ಎಲ್ಲಿಟ್ಟಿದ್ದಾರೋ ನಮಗೆ ಗೊತ್ತಿಲ್ಲವೆಂದು ಹೇಳಿದಳು. ಆಗ ಪೇತ್ರನೂ ಆ ಮತ್ತೊಬ್ಬ ಶಿಷ್ಯನೂ ಹೊರಟು ಸಮಾಧಿಯ ಕಡೆಗೆ ಹೋದರು. ಅವರಿಬ್ಬರೂ ಜೊತೆಯಾಗಿ ಓಡಿದರು. ಆದರೆ ಆ ಮತ್ತೊಬ್ಬ ಶಿಷ್ಯನು ಪೇತ್ರನಿಗಿಂತ ಮುಂದೆ ಓಡಿ ಮೊದಲೇ ಸಮಾಧಿಗೆ ಮುಟ್ಟಿ ಬಗ್ಗಿ ನೋಡಿ ಆ ನಾರು ಬಟ್ಟೆಗಳು ಬಿದ್ದಿರುವುದನ್ನು ಕಂಡನು; ಆದರೆ ಒಳಕ್ಕೆ ಹೋಗಲಿಲ್ಲ. ಸೀಮೋನ ಪೇತ್ರನು ಅವನ ಹಿಂದೆ ಬಂದು ಸಮಾಧಿಯೊಳಕ್ಕೆ ಹೋಗಿ ಆ ನಾರು ಬಟ್ಟೆಗಳು ಬಿದ್ದಿರುವುದನ್ನೂ ಆತನ ತಲೆಯ ಮೇಲಿದ್ದ ಕೈಪಾವಡವು ಆ ನಾರು ಬಟ್ಟೆಗಳು ಕೂಡ ಇರದೆ ಸುತ್ತಿ ಒಂದು ಕಡೆಯಲ್ಲಿ ಬೇರೆಯೇ ಇರುವುದನ್ನೂ ಕಂಡನು. ಆಗ ಸಮಾದಿಯ ಬಳಿಗೆ ಮೊದಲು ಬಂದಿದ್ದ ಆ ಮತ್ತೊಬ್ಬ ಮನುಷ್ಯನು ಸಹ ಒಳಕ್ಕೆ ಹೋಗಿ ನೋಡಿ ನಂಬಿದನು. ಆತನು ಸತ್ತ ಮೇಲೆ ಜೀವದಿಂದೆದ್ದು ಬರಬೇಕೆಂಬುದಾಗಿ ಶಾಸ್ತ್ರದಲ್ಲಿ ಬರೆದಿರುವ ಮಾತು ಅವರಿಗೆ ಇನ್ನೂ ತಿಳಿದಿರಲಿಲ್ಲ. ತರುವಾಯ ಆ ಶಿಷ್ಯರು ತಿರಿಗಿ ತಮ್ಮವರ ಬಳಿಗೆ ಹೋದರು.

ಆದರೆ ಮರಿಯಳು ಹೊರಗೆ ಸಮಾಧಿಯ ಬಳಿಯಲ್ಲಿ ಅಳುತ್ತಾ ನಿಂತಿದ್ದಳು. ಹೀಗೆ ಆಕೆ ಅಳುತ್ತಿರುವಾಗ ಸಮಾಧಿಯೊಳಗೆ ಬಗ್ಗಿ ನೋಡಲು ಯೇಸುವಿನ ದೇಹವು ಇಟ್ಟಿದ್ದ ಸ್ಥಳದಲ್ಲಿ ಬೆಳ್ಳಗಿರುವ ವಸ್ತ್ರಗಳನ್ನು ಹೊದ್ದುಕೊಂಡ ಇಬ್ಬರು ದೇವದೂತರನ್ನು ಕಂಡಳು; ಅವರಲ್ಲಿ ಒಬ್ಬನು ತಲೆ ಇದ್ದ ಕಡೆಯಲ್ಲಿ, ಒಬ್ಬನು ಕಾಲು ಇದ್ದ ಕಡೆಯಲ್ಲಿ ಕೂತಿದ್ದರು. ಅವರು ಆಕೆಯನ್ನು—ಅಮ್ಮಾ, ನೀನು ಯಾಕೆ ಅಳುತ್ತೀ ಎಂದು ಕೇಳಲು ಆಕೆ—ನನ್ನ ಸ್ವಾಮಿಯನ್ನು ತೆಗೆದುಕೊಂಡು ಹೋಗಿದ್ದಾರೆ; ಆತನನ್ನು ಎಲ್ಲಿ ಇಟ್ಟಿದ್ದಾರೋ ನನಗೆ ಗೊತ್ತಿಲ್ಲ ಅಂದಳು. ಇದನ್ನು ಹೇಳಿ ತಿರುಗಿ ಕೊಂಡು ಯೇಸು ನಿಂತಿರುವುದನ್ನು ಕಂಡಳು. ಆದರೆ ಆತನು ಯೇಸು ಅಂತ ಆಕೆಗೆ ತಿಳಿಯಲಿಲ್ಲ. ಯೇಸು ಆಕೆಯನ್ನು ಅಮ್ಮಾ ಏಕೆ ಅಳುತ್ತೀ ? ಯಾರನ್ನು ಹುಡುಕುತ್ತೀ ಎಂದು ಕೇಳಲು ಆಕೆ ಆತನನ್ನು ತೋಟಗಾರನೆಂದು ನೆನಸಿ ಆತನಿಗೆ—ಅಯ್ಯಾ, ನೀನು ಆತನನ್ನು ಎತ್ತಿಕೊಂಡು ಹೊ-

ಗಿದ್ದರೆ ಎಲ್ಲಿ ಇಟ್ಟಿದ್ದೀ ನನಗೆ ಹೇಳು; ನಾನು ತೆಗೆದು ಕೊಂಡು ಹೋಗುತ್ತೇನೆ ಎಂದು ಹೇಳಿದಳು. (ಯೋಹಾನ 21 : 1-15). ಅನಂತರ ಆಕೆಗೆ ಯೇಸುಕ್ರಿಸ್ತರ ಗುರುತು ಸಿಕ್ಕಿತು.

## 4. ಯೇಸು ಕ್ರಿಸ್ತರ ಸಂದೇಶ— ಯಾರು ತಲುಪಿಸಿದರು ?

"ಬೇಗ ಹೋಗಿ ಆತನ ಶಿಷ್ಯರಿಗೆ — ಸತ್ತವನು ಬದುಕಿದ್ದಾನೆ ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ. ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ.'' (ಮತ್ತಾಯ 28:7). ಮೇಲಿನ ಮಾತನ್ನು ಕಲ್ಲಿನ ಮೇಲೆ ಕುಳಿತು ಕರ್ತನ ದೂತನು ಇಬ್ಬರು ಮರಿಯರಿಗೆ ಹೇಳಿದುದಾಗಿ ಮತ್ತಾಯ ಬರೆದಿದ್ದಾನೆ. ದಾರಿಯಲ್ಲಿ ಯೇಸು ಕ್ರಿಸ್ತರು ಅವರೆದುರಿಗೆ ಬಂದು ಅದೇ ಸಂದೇಶವನ್ನು ತಿಳಿಸಿದುದಾಗಿ ಸಹ ಮತ್ತಾಯ ಬರೆದಿರುವನು.

ಸಮಾಧಿಯ ಒಳಗೆ ಕುಳಿತಿದ್ದ ವ್ಯಕ್ತಿ ಮೇಲಿನ ಮಾತುಗಳನ್ನು ಹೇಳಿದುದಾಗಿ ಮಾರ್ಕನು ಬರೆದಿದ್ದಾನೆ. ಸಮಾಧಿಯೊಳಗಿದ್ದ ಇಬ್ಬರು ವ್ಯಕ್ತಿಗಳು ಯಾವುದೇ ಸಂದೇಶ ಶಿಷ್ಯರಿಗೆ ತಲುಪಿಸಲು ಹೇಳಿದುದಾಗಿ ಲೂಕನು ಬರೆದಿಲ್ಲ.

ಯೋಹಾನನು ತನ್ನ ಗ್ರಂಥದಲ್ಲಿ ಯೇಸು ಕ್ರಿಸ್ತರು ಮಗ್ದಲದ ಮರಿಯಳೊಡನೆ ಈ ರೀತಿ ಹೇಳಿದುದಾಗಿ ಬರೆದಿದ್ದಾನೆ: "ನಾನು ನನ್ನ ತಂದೆಯೂ ನಿಮ್ಮ ತಂದೆಯೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿ ಹೋಗುತ್ತೇನೆ ಎಂದು ಅವರಿಗೆ (ಶಿಷ್ಯರಿಗೆ) ಹೇಳು ಅಂದನು.'' (ಯೋಹಾನ 20:17).

## 5. ಅವರು ಸಂದೇಶವನ್ನು ತಲುಪಿಸಿದರೋ ?

ಸಂದೇಶವನ್ನು ಹೆಂಗಸರು ತಲುಪಿಸಿದರೋ ಇಲ್ಲವೋ ಎಂಬ ಸಂಗತಿಯ ಕುರಿತು ಮತ್ತಾಯನು ಏನೂ ಹೇಳಿಲ್ಲ. ಆದರೆ ಮತ್ತಾಯ (28:16)ರ ಪ್ರಕಾರ ಶಿಷ್ಯರು ಯೇಸು ಕ್ರಿಸ್ತರು ಸೂಚಿಸಿದ ಸ್ಥಳಕ್ಕೆ ತೆರಳಿದ ಕಾರಣ ಆ ಸ್ತ್ರೀಯರು ಸಂದೇಶವನ್ನು ತಲುಪಿಸಿದ್ದರೆಂಬುದು ವ್ಯಕ್ತವಾಗುವುದು.

ಆದರೆ ಮಾರ್ಕನ ಪ್ರಕಾರ ಆ ಸ್ತ್ರೀಯರು ಕೂಡಲೇ ಆಶ್ಚರ್ಯಗೊಂಡು ನಡುಗುತ್ತಾ ಓಡಿ ಹೋದರೆಂದೂ ಅವರು ಯಾರೊಡನೆಯೂ ಏನೂ ಹೇಳಲಿಲ್ಲವೆಂದೂ ಅವರು ಹೆದರಿದ್ದರೆಂದೂ ತಿಳಿದು ಬರುತ್ತಿದೆ.

ಸ್ತ್ರೀಯರು ಶಿಷ್ಯರೊಡನೆ ಯೇಸುಕ್ರಿಸ್ತರು ಎದ್ದಿರುವರೆಂದು ತಿಳಿಸಿದರೆಂದು ಲೂಕನು ಬರೆದಿರುವನು. ಮಗ್ದಲದ ಮರಿಯಳು ಯೇಸು ಹೇಳಿದುದನ್ನು ಶಿಷ್ಯರಿಗೆ ತಿಳಿಸಿದಳೆಂದು ಯೋಹಾನನು ಬರೆದಿರುವನು.

## 6. ಆ ವಾರ್ತೆಯನ್ನು ಯಾವ ರೀತಿ ಸ್ವೀಕರಿಸಲಾಯಿತು?

ಮತ್ತಾಯ ಈ ಸಂಗತಿಯ ಕುರಿತು ಏನೂ ಹೇಳಿಲ್ಲ.

ಮಾರ್ಕ:–ಯೇಸುಕ್ರಿಸ್ತರು ಜೀವಿಸಿರುವರೆಂದೂ ಅವರನ್ನು ಮಗ್ದಲದ ಮರಿಯಳು ಕಂಡಳೆಂದೂ ಹೇಳಿದಾಗ ಶಿಷ್ಯರು ನಂಬಲಿಲ್ಲ.

ಲೂಕ:–ಸ್ತ್ರೀಯರ ಮಾತುಗಳು ಬರೇ ಕಟ್ಟುಕಥೆಗಳಂತೆ ಶಿಷ್ಯರಿಗೆ ಕಂಡುಬಂದುವು. ಅವರು ನಂಬಲಿಲ್ಲ. ಯೋಹಾನನು ಈ ಸಂಗತಿಯ ಕುರಿತು ಏನೂ ಹೇಳಿಲ್ಲ.

## 7. ಯೇಸುಕ್ರಿಸ್ತರು ಮೊದಲು ಅವರನ್ನು ಎಲ್ಲಿ ಕಂಡರು

ಯೇಸುಕ್ರಿಸ್ತರ ಶಿಷ್ಯರಿಗೆ ಸಂದೇಶ ತಲುಪಿದಾಗ ಅವರು ಗಲಿಲಾಯದ ಒಂದು ಬೆಟ್ಟಕ್ಕೆ ಸೂಚಿತ ರೀತಿಯಲ್ಲಿ ಹೋದರೆಂದೂ ಅಲ್ಲಿ ಅವರನ್ನು ಕಂಡು ಕೆಲವರು ಅಡ್ಡ ಬಿದ್ದರೆಂದೂ ಕೆಲವರು ಸಂದೇಹಿಸಿದರೆಂದೂ ಮತ್ತಾಯನು ಬರೆದಿದ್ದಾನೆ.

ಮಾರ್ಕ:–ಮರಿಯಳಿಗೆ ಯೇಸು ಮೊದಲು ಕಾಣಿಸಿದರು. ಅನಂತರ ಇಬ್ಬರಿಗೆ ಇನ್ನೊಂದು ವೇಷದಲ್ಲಿ ಕಾಣಿಸಿದರು. ಆಮೇಲೆ ಹನ್ನೊಂದು ಮಂದಿ ಶಿಷ್ಯರು ಊಟಕ್ಕೆ ಕೂತಿದ್ದಾಗ ಅವರಿಗೆ ಕಾಣಿಸಿಕೊಂಡು ಅವರ ಅಪನಂಬಿಕೆಗೂ ಅವರ ಮನಸ್ಸಿನ ಕಾಠಿಣ್ಯಕ್ಕೂ ಅವರನ್ನು ಗದರಿಸಿದರು. ಆ ಶಿಷ್ಯರು ಯೇಸುಕ್ರಿಸ್ತರು ಮರಿಯಳಿಗೆ ಕಾಣಿಸಿಕೊಂಡುದನ್ನು ನಂಬಿರಲಿಲ್ಲ.

ಲೂಕನು ಮತ್ತಾಯನನ್ನು ವ್ಯಕ್ತವಾಗಿ ನಿಷೇಧಿಸಿ ಬರೆದಿರುತ್ತಾನೆ. ಯೇಸುಕ್ರಿಸ್ತರು ತನ್ನ ಹನ್ನೊಂದು ಮಂದಿ ಶಿಷ್ಯರನ್ನು ಯೆರೂಸಲೇಮಿನಲ್ಲಿ ತಾನು ಪುನರುತ್ಥಾನಗೊಂಡ ದಿನದ ಸಂಜೆಯೇ ನೋಡಿದುದಾಗಿ ಲೂಕನು ಬರೆದಿರುತ್ತಾನೆ.

ಯೋಹಾನನು ಲೂಕನ ಮಾತನ್ನು ಸ್ಥಿರೀಕರಿಸಿ ಬರೆದಿರುತ್ತಾನೆ. ಶಿಷ್ಯರು ಯೆಹೂದ್ಯರನ್ನು ಭಯಪಟ್ಟು ಜೊತೆ ಸೇರಿದ್ದಲ್ಲಿಗೆ ಥಕ್ಕನೆ ಯೇಸುಕ್ರಿಸ್ತರು ಬಂದರೆಂದು ಯೋಹಾನನು ಬರೆದಿರುತ್ತಾನೆ. (ಯೋಹಾನ 20:19).

ವಾದಿಯು ನಾಲ್ವರು ಸಾಕ್ಷಿಗಳ ಹೇಳಿಕೆಗಳ ಮೇಲಿನ ಉದಾಹರಣೆಗಳಿಂದ ನಾವು ಈ ಕೆಳಗಿನ ತೀರ್ಮಾನಕ್ಕೆ ಬಂದಿರುತ್ತೇವೆ.

1. ಈ ಹೇಳಿಕೆಗಳು ದೇವರ ವಚನಗಳಿಂದಾಗಲೀ ದೇವರಿಂದ ಪ್ರಬೋಧಿತಗೊಂಡು ಬರೆದ ವಚನಗಳೆಂದಾಗಲೀ ವಿವರಿಸಲು ಸಾಧ್ಯವಿಲ್ಲ.

2. ಮೇಲಿನ ನಾಲ್ಕು ಗ್ರಂಥಗಳಲ್ಲಿ ಬರೆದ ಸಂಗತಿಗಳು ಪ್ರತ್ಯಕ್ಷದರ್ಶಿಗಳ ಹೇಳಿಕೆಗಳಿಂದಾಗಲೀ ವಿಶ್ವಾಸನೀಯ ಮೂಲಗಳಿಂದ ಸಂಗ್ರಹಿಸಲ್ಪಟ್ಟುವು ಎಂದಾಗಲೀ ಹೇಳಲು ಸಾಧ್ಯವಿಲ್ಲ. ಉದಾಹರಣೆಗಾಗಿ ಒಬ್ಬ ಹೇಳುವುದೇನೆಂದರೆ ಯೇಸುಕ್ರಿಸ್ತರ ಬಂಧನದ ಸಮಯ ಪ್ರಧಾನ ಪುರೋಹಿತರು ಮತ್ತು ಹಿರಿಯರು ಹಾಜರಿದ್ದರೆಂದು. ಆದರೆ ಇನ್ನೊಬ್ಬ ಅದನ್ನು ನಿಷೇಧಿಸುತ್ತಾನೆ. ಒಬ್ಬ ಹೇಳುತ್ತಾನೆ ಗಲಿಲಾಯದ ಒಂದು ಬೆಟ್ಟದಲ್ಲಿ ತನ್ನನ್ನು ಶಿಷ್ಯರು ಭೇಟಿಯಾಗಲು ಯೇಸುಕ್ರಿಸ್ತರು ನಿಶ್ಚಯಿಸಿದರೆಂದೂ ಅನಂತರ ಅಲ್ಲಿ ಅವರನ್ನು ಭೇಟಿಯಾದರೆಂದೂ, ಇನ್ನೊಬ್ಬ ಹೇಳುವುದೇನೆಂದರೆ ಈ ಭೇಟಿ ನಡೆದುದು ಯೆರೂಸಲೇಮಿನಲ್ಲಿ ಎಂದು. ಈ ಸಂಭವಗಳು ಶಿಷ್ಯರಿಂದ ಬರೆಯಲ್ಪಟ್ಟುವು ಎಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಭೇಟಿಯು ನಡೆದ ಸ್ಥಳ ಅವರಿಗೆ ಸರಿಯಾಗಿ ತಿಳಿದಿರಬೇಕಾಗಿತ್ತು. ಆ ಭೇಟಿಯ ಕಾಲದಲ್ಲಿ ಹನ್ನೊಂದು ಶಿಷ್ಯರೂ ಇದ್ದಾರೆಂದು ಇಬ್ಬರು ಲೇಖಕರೂ ಬರೆದಿರುವರು. ಇದೇ ಪ್ರಕಾರ ದ್ರೋಹಿಯಾದ ಯೂದನು ಯೇಸುಕ್ರಿಸ್ತರ ಹಸ್ತವನ್ನು ಚುಂಬಿಸಿ ಗುಂಪಿಗೆ ಅವರ ಪರಿಚಯ ತೋರಿಸಿದನೆಂದು ಒಬ್ಬ ಬರೆದಿರುವನು. ಆದರೆ ಯೇಸುಕ್ರಿಸ್ತರು ಸ್ವತಃ ತನ್ನ ಪರಿಚಯ ಹೇಳಿದರೆಂದು ಇನ್ನೊಬ್ಬ ಬರೆದಿರುವನು.

ಆದುದರಿಂದ ಇವರ ಸಾಕ್ಷ್ಯಗಳು ಪರಸ್ಪರ ವಿರುದ್ಧವೆಂಬುದು ಸ್ಪಷ್ಟವಾಗುತ್ತದೆ. ಈ ಕೃತಿಗಳು ಪ್ರತ್ಯಕ್ಷದರ್ಶಿಗಳಿಂದ ಬರೆಯಲ್ಪಟ್ಟುವಲ್ಲವೆಂಬುದೂ ಸ್ಪಷ್ಟ ಮತ್ತು ಇತರ ಯಾವ ಮೂಲಗಳಿಂದ ಈ ವಿವರಗಳನ್ನು ಶೇಖರಿಸಲಾಯಿತು ಎಂಬುದನ್ನು ಸಹ ಅವು ವ್ಯಕ್ತಗೊಳಿಸುವುದಿಲ್ಲ. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣಹೊಂದಿ ಪುನರುತ್ಥಾನಗೊಂಡರೆಂದು ಸಂಗತಿಯನ್ನು ಯಥಾರ್ಥವೆಂಬ ಈ ಕೃತಿಗಳ ಲೇಖಕರು ಅವರ ಶಿಷ್ಯರಾಗಿದ್ದರೂ ಸಹ ನಂಬಲು ಸಾಧ್ಯವಿಲ್ಲ. ಏಕೆಂದರೆ ಈ ಶಿಷ್ಯರೆಲ್ಲರೂ ಶಿಲುಬೆಯ ಸಂಭವದ ಸಮಯದಲ್ಲಿ ಯೇಸುಕ್ರಿಸ್ತರನ್ನು ಬಿಟ್ಟು ಓಡಿಹೋಗಿದ್ದರು. ಯೇಸುಕ್ರಿಸ್ತರನ್ನು ಪ್ರಧಾನ ಪುರೋಹಿತರ ಭವನದವರೆಗೆ ಅನುಸರಿಸಿದ ಪೇತ್ರನು ಮೂರುಬಾರಿ ಸ್ವಂತ ಇಚ್ಛೆಯಿಂದ ಸುಳ್ಳು ಹೇಳಿರುವನೆಂದು ನಾಲ್ವರು ಲೇಖಕರೂ ಆರೋಪಿಸಿರುವರು. ಯೇಸುಕ್ರಿಸ್ತರು ಸತ್ತರೆಂದು ಹೇಳಲ್ಪಡುವ ಸಮಯದಲ್ಲಾಗಲೀ ಪುನರುತ್ಥಾನಗೊಂಡರೆಂದು ಹೇಳಲ್ಪಡುವ ಸಮಯದಲ್ಲಾಗಲೀ ಅವರ ಶಿಷ್ಯರ್ಯಾರೂ ಇರಲಿಲ್ಲವೆಂದು ನಾಲ್ವರು ಲೇಖಕರು ಬರೆದಿರುವರು. ಲೋಕದ ಮೋಕ್ಷವು ವಾದಿಯ ಹೇಳಿಕೆಯ ಪ್ರಕಾರ ಆಧರಿಸಿರುವ ಪ್ರಧಾನ ಸಂಭವದ ಕುರಿತು ಸರಿಯಾದ ಸಾಕ್ಷ್ಯಗಳನ್ನು ಒದಗಿಸಲು ಈ ಲೇಖನಗಳು ಶಕ್ತವಾಗಿಲ್ಲವೆಂದು ಹೇಳದೆ ನಮಗೆ ನಿವೃತ್ತಿಯಿಲ್ಲ.

ಪ್ರತಿವಾದಿಯು ಹೇಳಿಕೆಯಲ್ಲಿ ಯೇಸುಕ್ರಿಸ್ತರ ಶಾಪಗ್ರಸ್ತ ಮರಣದ ವಿರುದ್ಧವಾಗಿ ಅವರು ಶಿಲುಬೆಯಿಂದ ಇಳಿಸಲ್ಪಟ್ಟಾಗ ಮೂರ್ಛಿತರಾಗಿದ್ದರೆಂಬುದರ ಕುರಿತು ಕೊಟ್ಟಿರುವ ಆಧಾರಗಳಲ್ಲಿ ಪ್ರಧಾನ ಸಂಗತಿಗಳನ್ನು ಈ ಕೆಳಗೆ ಕೊಡುತ್ತೇವೆ.*

1. ಮೂರು ಗಂಟೆಗಳ ಕಾಲ ಶಿಲುಬೆಯಲ್ಲಿ ತೂಗಾಡುತ್ತಾ ಇದ್ದುದು ಮರಣ ಸಂಭವಿಸಲು ಪರ್ಯಾಪ್ತವಾಗಿರಲಿಲ್ಲ. ಕೆಲವು ಸಾರಿ ಶಿಲುಬೆಗೆ ಕೊಡಲ್ಪಟ್ಟ ಮನುಷ್ಯನು ಮೂರನೆಯ ದಿನದ ವರೆಗೆ ಸಾಯುತ್ತಿರಲಿಲ್ಲ.**

---

* ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಸಂಗತಿಗಳನ್ನು ಬಿಟ್ಟು ಬಿಡಲಾಗಿದೆ.

** ಕಾವಲುಗಾರರನ್ನೂ ಒಬ್ಬ ಶತಾಧಿಪತಿಯನ್ನೂ ಶಿಲುಬೆಗೆ ಕೊಡಲ್ಪಟ್ಟವರ ಸಮೀಪ ನಿಲ್ಲಿಸುವುದು ಶರೀರವನ್ನು ಶಿಲುಬೆಯಿಂದ ಬೇರ್ಪಡಿಸುವುದನ್ನು ತಡೆಯಲಿಕ್ಕಾಗಿದೆ. ಶಿಲುಬೆಗೆ ಕೊಡಲ್ಪಟ್ಟವರಿಗೆ ಮರಣವು ಬಹಳ ನಿಧಾನವಾಗಿ ಸಂಭವಿಸುವ ಕಾರಣದಿಂದ ಈ ರೀತಿ ಮಾಡಲಾಗುತಿತ್ತು. ಕೆಲವು ಸಾರಿ ಮೂರು ದಿವಸಗಳ ವರೆಗೆ ಮರಣವು ಸಂಭವಿಸದೆ ಇದ್ದು ಕೊನೆಗೆ ಶರೀರವು ಮರಕಟ್ಟುವ ಕಾರಣದಿಂದಲೂ ಅನ್ನಾಭಾವದ ಕಾರಣದಿಂದಲೂ ಮರಣವು ಸಂಭವಿಸುತ್ತಿತ್ತು (Euseb H. E. VIII, 8; Sen, Prov. 3) ಈ ಕಾವಲಿನ ಏರ್ಪಾಡು ಇಲ್ಲದಿರುತ್ತಿದ್ದರೆ ಶಿಲುಬೆಗೆ ಕೊಡಲ್ಪಟ್ಟವರು ಇಳಿಸಲ್ಪಟ್ಟು ರಕ್ಷಿತರಾಗುತ್ತಿದ್ದರು (ಈ ರೀತಿಯ ಒಂದು ಸಂಭವ Sandokes Herod VII 194ನಲ್ಲಿ ವಿವರಿಸಲಾಗಿದೆ. ಜೋಸೆಫಸ್ ಎಂಬ

2. ಯೇಸುಕ್ರಿಸ್ತರು ಅಷ್ಟುಬೇಗ ತೀರಿಹೋದುದು ಹೇಗೆ ಎಂದು ಪಿಲಾತನು ಆಶ್ಚರ್ಯಗೊಂಡನು. (ಮಾರ್ಕ 5:44). ಶಿಲುಬೆಯಲ್ಲಿ ಯೇಸುಕ್ರಿಸ್ತರು ಇದ್ದ ಸಮಯ ಮರಣ ಸಂಭವಿಸಲು ಸಾಕಾಗಿರಲ್ಲವೆಂದು ಆತನಿಗೆ ಅನುಭವದ ಮೇಲಿನಿಂದ ತಿಳಿದಿದ್ದಿತು. ಪಿಲಾತನೂ, ಅರಿಮಥಾಯದ ಯೋಸೇಫನೂ ಶತಾಧಿಪತಿಯೂ ಯೇಸುಕ್ರಿಸ್ತರ ಕುರಿತು ಸಹಾನುಭೂತಿ ಇದ್ದವರಾಗಿದ್ದರು. ಅವರು ಯೇಸುಕ್ರಿಸ್ತರನ್ನು ಮರಣದಿಂದ ರಕ್ಷಿಸಲು ಸ್ವಾಭಾವಿಕವಾಗಿ ಉತ್ಸುಕರಾಗಿದ್ದರು.

3. ಯೇಸುಕ್ರಿಸ್ತರು ಶಿಲುಬೆಯಲ್ಲಿದ್ದಷ್ಟು ಸಮಯ ಶಿಲುಬೆಯಲ್ಲಿದ್ದ ಇಬ್ಬರು ಕಳ್ಳರು ಜೀವದಿಂದಿದ್ದರು. ಅವರನ್ನು ಕೊಲ್ಲಲು ಅವರ ಕಾಲುಗಳನ್ನು ಮುರಿಯಲಾಯಿತು. ಯೇಸುಕ್ರಿಸ್ತರಿಗೆ ಇದು ಸಂಭವಿಸಲಿಲ್ಲ. (ಯೋಹಾನ 19:34)

4. ಒಬ್ಬ ಸೈನಿಕನು ಯೇಸುಕ್ರಿಸ್ತರ ಬಲ ಪಕ್ಕೆಯನ್ನು ಈಟಿಯಿಂದ ತಿವಿದಾಗ (ಯೋಹಾನ 19:34) (ಪುರಾತನ ಚಿತ್ರಗಳು ವ್ಯಕ್ತಗೊಳಿಸುವ ರೀತಿಯಲ್ಲಿ) ರಕ್ತವೂ ನೀರೂ ಹೊರಬಂದಿತು ಇದು ಯೇಸುಕ್ರಿಸ್ತರು ಜೀವದಿಂದಿದ್ದರೆಂದೂ ಅವರ ಶರೀರದಲ್ಲಿ ರಕ್ತ ಸಂಚಾರ ಇದ್ದಿತೆಂಬುದಕ್ಕೂ ಸಾಕ್ಷಿಯಾಗಿದೆ

5. ಯೇಸುಕ್ರಿಸ್ತರ ಶರೀರವನ್ನು ಶಿಲುಬೆಯಿಂದ ಇಳಿಸಿದ ನಂತರ ಅವರ ಶರೀರವನ್ನು ಅವರ ವಿರೋಧಿಗಳಿಗೆ ಕೊಡಲಿಲ್ಲ. ಅವರ ಸ್ನೇಹಿತರಿಗೆ ಕೊಡಲಾಯಿತು. (ಯೋಹಾನ 19:38).

6. ಯೇಸುಕ್ರಿಸ್ತರ ಸ್ನೇಹಿತರು ಅವರ ಶರೀರವನ್ನು ಪಡೆಯಲು ತೋರಿಸಿದ ಆತುರವನ್ನು ನೋಡುವಾಗ ಅವರಿಗೆ ಯೇಸುಕ್ರಿಸ್ತರು ಮೃತರಾಗಿದ್ದರೆಂಬ ನಂಬಿಕೆ ಇರಲಿಲ್ಲವೆಂದೂ ಅವರನ್ನು ಹೇಗಾದರೂ ರಕ್ಷಿಸಬೇಕೆಂಬ ಆಶೆ ಅವರಲ್ಲಿ ಇದ್ದಿತೆಂದೂ ಗೊತ್ತಾಗುತ್ತದೆ.

7. ಸಮಾಧಿಯ ಬಳಿಯಲ್ಲಿ ಒಬ್ಬ ಕಾವಲುಗಾರನನ್ನು ನೇಮಿಸಲು ಯಹೂದ್ಯರು ಆವಶ್ಯಪಟ್ಟುದನ್ನು ನೋಡುವಾಗ ಅವರಿಗೆ ಸಹ ಯೇಸುಕ್ರಿಸ್ತರ ಮರಣದ ಕುರಿತು ಸಂಶಯವಿದ್ದಿತೆಂದು ವ್ಯಕ್ತವಾಗುತ್ತದೆ. ಅವರು ಮೃತರಾದುದು ಖಂಡಿತವೆಂದು ಯಹೂದ್ಯರು ತಿಳಿದಿದ್ದರೆ ಶಿಷ್ಯರು ಅವರ ಶರೀರವನ್ನು ಅಪಹರಿಸುವುದನ್ನು ಅವರು ತಡೆಯಲು ಯತ್ನಿಸುತ್ತಿರಲಿಲ್ಲ. ಅವರು ಕೊಟ್ಟ ಕಾರಣ "ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳುವರು" (ಮತ್ತಾಯ 27:64) ಎಂಬುದು ಹಾಸ್ಯಾಸ್ಪದವಾಗಿದೆ. ಏಕೆಂದರೆ ಯೇಸುಕ್ರಿಸ್ತರು ಪುನರುತ್ಥಾನಗೊಂಡರೆಂದು ಶಿಷ್ಯರು ಹೇಳಿದರೆ ಅವರೊಡನೆ ಯಹೂದ್ಯರು "ಆತನು ಜನರಿಗೆ ತನ್ನನ್ನು ತೋರಿಸಿಕೊಳ್ಳಲಿ" ಎಂದು ಹೇಳಿ ಹಾಗೆ ತೋರಿಸಿಕೊಂಡರೆ ಪುನಃ ಬಂಧಿಸುತ್ತಿದ್ದರು. ಸಮಾಧಿಯ ಬಳಿಯಲ್ಲಿ ಸೇವಕನನ್ನು ನೇಮಿಸಲು ಆವಶ್ಯಪಟ್ಟುದರ ಯಥಾರ್ಥ ಕಾರಣವೇನೆಂದರೆ ಅವರು ಮರಣಹೊಂದಿದುದರಲ್ಲಿ ಯಹೂದ್ಯರಿಗೆ ವಿಶ್ವಾಸವಿರಲಿಲ್ಲ.

8. ಯೇಸುಕ್ರಿಸ್ತರನ್ನು ಶಿಲುಬೆಗೆ ಕೊಡಲು ಪಿಲಾತನಿಗೆ ಇಷ್ಟವಿರಲಿಲ್ಲ: ಅವರು ಶಿಲುಬೆಯಿಂದ ಮರಣಗೊಳ್ಳದೆ ರಕ್ಷಿತನಾಗುವುದು ಅವನಿಗೆ ಸಂತೋಷದಾಯಕವಾಗಿತ್ತು. ಆತನು ಪರೋಕ್ಷವಾಗಿಯೂ ರಹಸ್ಯವಾಗಿಯೂ ಯೇಸುಕ್ರಿಸ್ತರನ್ನು ರಕ್ಷಿಸಲು ಸಹಾಯಮಾಡಿದನು. ಆತನ ಪತ್ನಿಯ ಕನಸು ಆತನಿಗೆ ಸಾಧ್ಯವಿರುವಷ್ಟು ಪ್ರಯತ್ನವನ್ನು ಯೇಸುಕ್ರಿಸ್ತರ ವಿರೋಧಿಗಳಿಂದ ಅವರನ್ನು ರಕ್ಷಿಸಲಿಕ್ಕಾಗಿ ಮಾಡಲು ಪ್ರೇರೇಪಿಸಿರಬೇಕು.

9. ಯೇಸುಕ್ರಿಸ್ತರ ಎಲುಬುಗಳನ್ನು ಮುರಿಯದ ಶತಾಧಿಪತಿಯೂ ಸೈನಿಕರೂ ಸಮಾಧಿಯ ಕಾವಲಿಗೆ ನಿಯಮಿತರಾಗಿದ್ದಾಗ ನಿದ್ರೆಯನ್ನು ನಟಿಸಿದ ಕಾವಲುಗಾರರೂ ಆ ರಾಜ್ಯದ ಗವರ್ನರನಾದ ಪಿಲಾತನ ಹಾಗೆಯೇ ಯೇಸುಕ್ರಿಸ್ತರ ಕುರಿತು ಸಹಾನುಭೂತಿವುಳ್ಳವರಾಗಿದ್ದರು.

10. ಯೇಸುಕ್ರಿಸ್ತರನ್ನು ಇರಿಸಲಾದ ಸಮಾಧಿಯು ಒಂದು ದೊಡ್ಡ ಬಂಡೆಯಲ್ಲಿ ಕೊರೆಯಲ್ಪಟ್ಟಿದ್ದು ಹಲವು ಮಂದಿ ಉಸಿರುಗಟ್ಟದೆ ನಿಲ್ಲಬಹುದಾದ ಒಂದು ಕೋಣೆಯಂತಿದ್ದಿತು. ಆ ಸಮಾಧಿ ಯೇಸು ಕ್ರಿಸ್ತರ ಒಬ್ಬ ಸ್ನೇಹಿತನದಾಗಿತ್ತು. ಆತನು ಅವರನ್ನು ರಕ್ಷಿಸಲು ಬೇಕಾದ ಎಲ್ಲಾ ಜಾಗರೂಕತೆಗಳನ್ನು ಕೈಗೊಂಡಿರಬಹುದು.

---

ವನ ಸ್ನೇಹಿತನು ಈ ರೀತಿ ರಕ್ಷಿತನಾದನು. ಮೂವರಲ್ಲಿ ಒಬ್ಬ ಮಾತ್ರ ಈ ರೀತಿ ರಕ್ಷಿಸಲ್ಪಟ್ಟನು. ಪೂರ್ಣ ವಿವರಕ್ಕಾಗಿ **Dictionary of the Bible by Sir William Smith & Rev J. M. Fuller, M. A., London 1893 (Crucifiction)** ನೋಡಿರಿ.

ಸಬ್ಬತ್‌ದಿನದ ಮರುದಿವಸ ಆದಿತ್ಯವಾರ ಯಹೂದ್ಯರು ಆ ಸ್ಥಳವನ್ನು ಸಂದರ್ಶಿಸಲು ಸಾಧ್ಯತೆಯಿರುವ ದಿವಸ ಬೆಳಗಾತಕ್ಕಿಂತ ಮೊದಲೇ ಕತ್ತಲಿರುವಾಗಲೇ ಯೇಸುಕ್ರಿಸ್ತರು ಆ ಸಮಾಧಿಯಲ್ಲಿರಲಿಲ್ಲ. ಬಾಗಿಲಿಗೆ ಎದುರಾಗಿಟ್ಟ ಕಲ್ಲು ಉರುಳಿ ಹೋಗಿದ್ದಿತು; ಶರೀರವು ಸಮಾಧಿಯೊಳಗಿರಲಿಲ್ಲ. ಸ್ವಲ್ಪ ಸಮಯದೊಳಗೆ ಯೇಸುಕ್ರಿಸ್ತರನ್ನು ತೋಟಗಾರನ ವೇಷದಲ್ಲಿ ಮಗ್ದಲದ ಮರಿಯು ನೋಡಿದಳು. ಅವರು ಪುನಃ ಯಹೂದ್ಯರಿಂದ ಗುರುತಿಸಲ್ಪಟ್ಟು ಪುನಃ ಶಿಲುಬೆಗೆ ಕೊಡಲ್ಪಡದ ರೀತಿಯಲ್ಲಿ ಛದ್ಮ ವೇಷ ಧರಿಸಿದ್ದರೆಂಬುದು ಸ್ಪಷ್ಟವಾಗುತ್ತದೆ.

11. ಗಲಿಲಾಯುವೆಂಬ ದೂರ ಪ್ರಾಂತ್ಯಕ್ಕೆ ಹೋಗಬೇಕೆಂದೂ ಅಲ್ಲಿಗೆ ತಾನು ಮೊದಲೇ ತಲುಪುವೆನೆಂದೂ ಅಲ್ಲಿ ಅವರನ್ನು ಕಾಣುವೆನೆಂದೂ ಶಿಷ್ಯರಿಗೆ ಯೇಸುಕ್ರಿಸ್ತರು ಹೇಳಿ ಕಳುಹಿಸಿದರು (ಮತ್ತಾಯ 28: 7). ಅವರು ಯರೂಸಲೇಮನ್ನು ತ್ವರೆಯಿಂದ ಬಿಟ್ಟು ಹೋದರು. ಏಕೆಂದರೆ ಅವರು ಸಮಾಧಿಯಲ್ಲಿಲ್ಲದ್ದುದನ್ನು ಕಂಡು ಯಹೂದ್ಯರು ಅವರನ್ನು ಹುಡುಕಲು ತೊಡಗುವರೆಂದು ಅವರಿಗೆ ತಿಳಿದಿತ್ತು.

12. ಯಹೂದ್ಯರಿಂದ ಪುನಃ ಬಂಧಿತನಾಗದಂತೆ ರಕ್ಷೆಹೊಂದಲು ಅವರು ಬೇಕಾದ ಜಾಗರೂಕತೆಗಳನ್ನು ಕೈಗೊಂಡಿದ್ದರು. ಅವರು ತನ್ನ ಶಿಷ್ಯರನ್ನು ಮಾತ್ರ ಕಂಡರು. ಅದು ಸಹ ಬಹಿರಂಗವಾಗಿಯಲ್ಲ, ರಹಸ್ಯವಾಗಿ ಗುಪ್ತ ಸ್ಥಳಗಳಲ್ಲಿ ಕಂಡರು. ಅವರೊಡನೆ ಹೆಚ್ಚು ಸಮಯ ಇರಲಿಲ್ಲ. ಜನರ ಮಧ್ಯೆ ಬಹಿರಂಗವಾಗಿ ಬರಲಿಲ್ಲ; ಹಸಿವನ್ನೂ ಬಾಯಾರಿಕೆಯನ್ನೂ ಅನುಭವಿಸಿದರು. ಅವರ ಶಿಷ್ಯರನ್ನು ಕಂಡಾಗ ತಿನ್ನಲು ತಿಂಡಿ ಕೇಳಿ ಅವರೆದುರಿನಲ್ಲಿಯೇ ತಿಂದರು. (ಲೂಕ 24:42). ಯೇಸುಕ್ರಿಸ್ತರನ್ನು ಕಂಡು ಭೂತವೆಂದು ಶಿಷ್ಯರು ಭಯಪಟ್ಟಾಗ ಅವರು ಹೀಗೆಂದರು: "ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ ಎಂದು ಹೇಳಿದರು" (ಲೂಕ 24:39).

ಯೇಸುಕ್ರಿಸ್ತರನ್ನು ಇತರ ಶಿಷ್ಯರು ಕಂಡರೆಂಬುದರಲ್ಲಿ ಸಂಶಯಿಸಿದ ತೋಮನೊಡನೆ ಅವರು ಹೀಗೆಂದರು: "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು. ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು" (ಯೋಹಾನ 20:27).

ಯೇಸುಕ್ರಿಸ್ತರ ಶರೀರದ ಗಾಯಗಳನ್ನು ಗುಣಪಡಿಸಲು ಅವರ ಶಿಷ್ಯರು ಒಂದು ಮುಲಾಮನ್ನು ತಯಾರಿಸಿದ್ದರು. ಇದು ಅನಂತರ "ಯೇಸುಕ್ರಿಸ್ತರ ಮುಲಾಮು" ಅಥವಾ "ಅಪೊಸ್ತಲರ ಮುಲಾಮು" (Ointment of Jesus or ointment of Apostles) ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು.

ಈ ಸಂಗತಿಗಳೆಲ್ಲವೂ ಯೇಸುಕ್ರಿಸ್ತರು ಗಾಯಗೊಂಡ ಸ್ಥೂಲ ಶರೀರದೊಂದಿಗೆ ಸಮಾಧಿಯಿಂದ ಹೊರಗೆ ಬಂದರೆಂಬುದನ್ನು ಸುಸ್ಪಷ್ಟಗೊಳಿಸುತ್ತದೆ. ಪ್ರತಿವಾದಿಯು ಈ ಸಾಕ್ಷ್ಯವನ್ನು ವಾದಿಯು ಸಾಕ್ಷ್ಯದೊಂದಿಗೆ ಹೋಲಿಸಿ ನೋಡುವಾಗ ಪ್ರತಿವಾದಿಯು ಸಾಕ್ಷ್ಯಗಳು ಸಮಂಜಸವೆಂದೂ ಸ್ವೀಕಾರ ಯೋಗ್ಯವೆಂದೂ ವ್ಯಕ್ತವಾಗುತ್ತದೆ. ವಾದಿಯು ವಿಶ್ವಸನೀಯ ಸಾಕ್ಷ್ಯಗಳನ್ನು ತನ್ನ ವಾದಕ್ಕೆ ಆಧಾರವಾಗಿ ಕೊಡುಬಾರದ ಕಾರಣ ಈ ವಿವಾದ ವಿಷಯದಲ್ಲಿ ಸೋತಿರುವನು. ಆದುದರಿಂದ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿದುದಕ್ಕೆ ಸಾಕ್ಷ್ಯಗಳಿಲ್ಲವೆಂದು ತೀರ್ಮಾನಿಸುತ್ತೇವೆ. ಮರಣ ಹೊಂದಿಲ್ಲವಾದರೆ ಅವರು ಪುನರುತ್ಥಾನಗೊಳ್ಳಲೂ ಇಲ್ಲ. ವಾದಿಯು ನಾಲ್ಕು ಸಾಕ್ಷಿಗಳ ಪರಸ್ಪರ ವಿರುದ್ಧ ಹೇಳಿಕೆಗಳನ್ನು ಪರಾಂಬರಿಸಿದರೆ ಯೇಸುಕ್ರಿಸ್ತರು ಶಿಲುಬೆಯಿಂದ ಇಳಿಸಲ್ಪಟ್ಟಾಗ ಮರಣ ಹೊಂದಿರಲಿಲ್ಲವೆಂದೂ ಮೂರ್ಛಿತರಾಗಿದ್ದರೆಂದೂ ಸ್ಪಷ್ಟವಾಗುವುದು. ಅನಂತರ ಅವರು ಎಚ್ಚರಗೊಂಡು ತಮ್ಮ ಸ್ಥೂಲ ಶರೀರದೊಂದಿಗೆ ಸಮಾಧಿಯಿಂದ ಹೊರಗೆ ಬಂದರು. ಯೇಸುಕ್ರಿಸ್ತರು ಸೂಕ್ಷ್ಮ ಶರೀರದೊಂದಿಗೆ ಸಮಾಧಿಯಿಂದ ಬಂದಿದ್ದರೆ ಅವರ ಸ್ಥೂಲ ಶರೀರ ಏನಾಯಿತೆಂಬ ಪ್ರಶ್ನೆಗೆ ವಾದಿಯು ಸಮರ್ಪಕವಾಗಿ ಉತ್ತರಿಸಿಲ್ಲ.

ಯೇಸುಕ್ರಿಸ್ತರು ತನ್ನ ಸ್ನೇಹಿತರಿಂದ ಸಹಾಯ ಪಡೆದಿರದಿದ್ದರೆ ಅವರಿಗೆ ಮಗ್ದಲದ ಮೇರಿಗೆ ಕಂಡುಬಂದಂತೆ ತೋಟಗಾರನ ವೇಷಧರಿಸಲು ಬೇಕಾದ ವಸ್ತ್ರಗಳು ಎಲ್ಲಿಂದ ಪ್ರಾಪ್ತವಾದುವು ಎಂಬ ಪ್ರಶ್ನೆಗೆ ಉತ್ತರಿಸಲು ವಾದಿಗೆ ಸಾಧ್ಯವಾಗಿಲ್ಲ. ಆತನ ಶರೀರದಲ್ಲಿ ಕೆಲವು ಬಟ್ಟೆಗಳಿದ್ದುವು. ಈ ಬಟ್ಟೆ ಎಲ್ಲಿಂದ ಬಂತು? ಅವರ ಸ್ವಂತ ಬಟ್ಟೆಗಳನ್ನು ಸೈನಿಕರು ಅಪಹರಿಸಿದ್ದರು ಮತ್ತು

ಸಮಾಧಿಯು ಬಟ್ಟೆಗಳು ಸಮಾಧಿಯೊಳಗಿದ್ದುವು. ಇಬ್ಬರು ಪ್ರತ್ಯಕ್ಷದರ್ಶಿಗಳಾದ ಅರಿಮಥಾಯುದ ಯೋಸೆಫನೂ ನಿಕೊದೇಮನೂ (ಇವರು ಯೇಸುಕ್ರಿಸ್ತರ ದೇಹವನ್ನು ಕೊಂಡುಹೋಗಿ ಸಮಾಧಿಯಲ್ಲಿರಿಸಿ ಅನಂತರ ನಡೆದ ಸಂಭವಗಳನ್ನು ನೋಡಿದವರು) ವಾದಿಯು ಪರವಾಗಿ ಯಾವುದೇ ಸಾಕ್ಷ್ಯ ನೀಡಿಲ್ಲ. ಮೇಲಿನ ನಾಲ್ಕು ಕೃತಿಗಳಲ್ಲಿ ಯೇಸುಕ್ರಿಸ್ತರು ಸತ್ತ ನಂತರ ಎದ್ದರೆಂಬ ವಿಶ್ವಾಸವನ್ನು ಈ ಇಬ್ಬರು ಹೊಂದಿದವರಾಗಿದ್ದರೆಂಬುದರ ಕುರಿತು ಏನನ್ನೂ ಹೇಳಿಲ್ಲ.

ಈ ಕೇಸನ್ನು ತಳ್ಳಿಹಾಕದೆ ನಿವೃತ್ತಿ ಇಲ್ಲ. ಆದುದರಿಂದ ಹಾಗೆಯೇ ಮಾಡಿದ್ದೇವೆ.

| | |
|---|---|
| ಜಡ್ಜ XY | ಜಡ್ಜ AZ |
| ದಸ್ಕತ್ತು | ದಸ್ಕತ್ತು |

(ಮುಂದುವರಿಯುವುದು)


# THE SATHYADOOTHAN
**Malayalam Fortnightly Organ of the Ahmadiyya Movement**

## ಸತ್ಯದೂತನ್

**50 ವರ್ಷಗಳ ಸೇವೆ ಸಲ್ಲಿಸಿರುವ ಕೇರಳದ ಏಕ ಮುಸ್ಲಿಂ ಪಾಕ್ಷಿಕ ಪತ್ರ.**

ವಾರ್ಷಿಕ ಚಂದಾ: ರೂ. 8-00.    ಬಿಡಿ ಪ್ರತಿ: ಪೈಸೆ 0-35.

Manager:
**The SATHYADOOTHAN**
**Cannanore-670001. (Kerala)**

READD

# SAMADHANA VAZHI
**Tamil Fortnightly Organ of the Ahmadiyya Movement**

Apply to:

**The Manager,**
**SAMADHANA VAZHI,**
**55, Harris Road.**
**MADRAS-600002.**

# MESSAGE

From

## Sir Muhammad Zafrulla Khan

(Former President of the International Court of Justice, The Hague)



I am delighted to learn that it is proposed to publish an Ahmadiyya quarterly journal Yugarashmi from Mangalore. The journal is very appropriately named. The world is enveloped by darkness from all sides and mankind is in sore need of divine guidance if it is to survive and prosper. Mankind has turned its back upon its Maker and the only remedy is that it should recognise the Existence and Unity of God and through humble and sincere supplication should seek to establish communion with Him with the firm determination to conform to His will and pleasure in all things big and small.

I have no doubt that Yugarashmi will throughout endeavour to create in the minds of its readers the realisation of this truth. I pray for God's blessings upon all those who are connected with this blessed venture and supplicate that God of His grace and mercy may be pleased to crown their efforts with success and make Yugarashmi popular among its readers so that they might through it be enabled to recognise the light and begin to order their lives in accordance therewith.

London,
27th February 1975.

—**Muhammad Zafrulla Khan.**

(ಇದರ ಕನ್ನಡಾನುವಾದವನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.)

No. 2.1

YUGARASHMI Kannada Quarterly July-Sept. 1975/Wafa-Tabook 1354

# 'ಯುಗರಶ್ಮಿ'ಯ ಕುರಿತು

"...........ಸಂಚಿಕೆಯ ಪ್ರಯತ್ನ ಶ್ಲಾಘ್ಯ. ಯೇಸುಕ್ರಿಸ್ತನು ಶಿಲುಬೆಯಲ್ಲಿ ಮೃತನಾದನೇ, ಇಲ್ಲ, ಅಲ್ಲಿಂದ ಪಾರಾಗಿ ಭಾರತಕ್ಕೆ ಬಂದು ಮತ್ತೂ ಹಲವು ಕಾಲ ಬದುಕಿದ್ದನೇ ಎನ್ನುವ, ಇತಿಹಾಸದತ್ತ ಬೆಳಕು ಬೀರುವ ಧಾರಾವಾಹಿ ಕುತೂಹಲಕರವಾಗಿದೆ..........."

—ಉದಯವಾಣಿ

"........... ಮುಸ್ಲಿಂ ಮತ್ತು ಮುಸ್ಲಿಮೇತರರೊಳಗೆ ಸಾಮರಸ್ಯ ಉಂಟು ಮಾಡುವ 'ಯುಗರಶ್ಮಿ'ಯ ಹಂಬಲ ಮೆಚ್ಚಬೇಕಾದುದು.

—ನವಭಾರತ

"ಇಸ್ಲಾಮಿನ ಒಂದು ಶಾಖೆಯಾದ ಅಹ್ಮದಿಯ ಸಂಘಟನೆಯ ಸಂದೇಶವನ್ನು ಕರ್ನಾಟಕದ ಜನತೆಗೆ ತಲಪಿಸುವ ಉದ್ದೇಶದಿಂದ ......."ಯುಗರಶ್ಮಿ" ತ್ರೈಮಾಸಿಕ ಪ್ರಕಟಣೆಯನ್ನಾರಂಭಿಸಿದೆ. ಇಸ್ಲಾಮನ್ನು ಕುರಿತು ಅದರ ಬಗ್ಗೆ ಅಹಮದೀಯ ಸಂಘಟನೆಯ ವ್ಯಾಖ್ಯೆಯನ್ನುಳ್ಳ ಲೇಖನಗಳು ...... ಈ ಸಂಚಿಕೆಯಲ್ಲಿವೆ. ಈ ತ್ರೈಮಾಸಿಕದಲ್ಲಿ ಯೇಸುಕ್ರಿಸ್ತನು ಮರಣ ಹೊಂದಿದ ಸ್ಥಳದ ನಿರ್ಧಾರದ ಬಗ್ಗ ಲೇಖನ ಮಾಲೆ ಆರಂಭವಾಗಿದೆ."

—ಕನ್ನಡಪ್ರಭ

"ಅಹ್ಮದೀಯ ಸಂದೇಶವನ್ನು ಕನ್ನಡಿಗರಿಗೆ ತಲುಪಿಸುವ ಸದುದ್ದೇಶದಿಂದ ಹೊರಬಂದಿರುವ ತ್ರೈಮಾಸಿಕ "ಯುಗರಶ್ಮಿ". ಇಸ್ಲಾಮ್ ಧರ್ಮ, ಪೈಗಂಬರರ ನುಡಿಗಳು, ದೈವಚಿಂತನೆ ಇತ್ಯಾದಿ ಧರ್ಮಾಸಕ್ತರಿಗೆ ಉಪಯುಕ್ತ ಎನ್ನಬಹುದಾದ ಲೇಖನಗಳಿವೆ."

—ಪ್ರಜಾವಾಣಿ

"ಅಮೃತ ವಾಹಿನಿಯಾದ 'ಯುಗರಶ್ಮಿ' ಕೈಸೇರಿ ಸಂತೋಷವಾಯಿತು."

—ಓರ್ವ ಓದುಗ

Printed by: U. N Srinivas Bhat, at Aruna Press, Dongerkery Mangalore and Edited and Published by Muhammad Yusuf on behalf of Jamath Ahamediyya Mangalore at 23/1008 Ansari Road, Bunder, Mangalore-575001.